# ನಮ್ಮ ಜನ
# NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ – 01 ಸಂಚಿಕೆ – 286 | ಶೀರ್ಷಿಕೆ ಕೋಡ್: ಕೆಎಆರ್ ಕೆಎಎನ್ 28269 | ಚಿತ್ರದುರ್ಗ | ದಿನಾಂಕ: 05–06–2024 ಬುಧವಾರ | ಪುಟ: 4 | ಬೆಲೆ : ರೂ.2–00
Volume - 01 Issue - 286 | Title- Code: KARKAN 28269 | Chitradurga | Date: 05-06-2024 Wednesday | Page: 4 | Price: Rs. 2-00



ಒಳಪುಟದ ಸುದ್ದಿಗಳು

ಮತದಾರರ ತೀರ್ಪಿಗೆ ತಲೆಬಾಗುವೆ: ಕಾಂಗ್ರೆಸ್ ಅಭ್ಯರ್ಥಿ ಬಿ.ಎನ್.ಚಂದ್ರಪ್ಪ 2

ದಾವಣಗೆರೆ: 26094 ಮತಗಳ ಅಂತರದಿಂದ ಗೆದ್ದ ಪ್ರಭಾ ಮಲ್ಲಿಕಾರ್ಜುನ್ 3

ಸರ್ಕಾರ ಮತ್ತು ಸಮಾಜದ ಜವಾಬ್ದಾರಿ...... 4



ಸುದ್ದಿ, ಜಾಹಿರಾತಿಗೆ 9686622252


## ಕರ್ನಾಟಕ

ಕಾಂಗ್ರೆಸ್ 09



ಬಿಜೆಪಿ 17



ಜೆಡಿಎಸ್ 02



NDA 293





INDIA 233



OTH 17








# ಕೋಟೆನಾಡಿನಲ್ಲಿ ಕಮಲ ಕಮಾಲ್

## ಬಿಜೆಪಿ ಅಭ್ಯರ್ಥಿ ಗೋವಿಂದ ಕಾರಜೋಳಗೆ ಭರ್ಜರಿ ಗೆಲುವು

**ಕಾಂಗ್ರೆಸ್ ಬಿ.ಎನ್.ಚಂದ್ರಪ್ಪ ಪಡೆದ ಮತ: 634152 – ಬಿಜೆಪಿ ಗೋವಿಂದ ಕಾರಜೋಳ ಪಡೆದ ಮತ: 683217 ಅಂತರ: 47065**





## ವಿಧಾನ ಸಭಾ ಕ್ಷೇತ್ರವಾರು ಮತಗಳ ವಿವರ

ಚಿತ್ರದುರ್ಗ ಲೋಕಸಭೆ ಚುನಾವಣೆ ಫಲಿತಾಂಶ ಪ್ರಕಟಗೊಂಡಿದ್ದು, ತೀವ್ರ ಹಣಾಹಣಿ ಏರ್ಪಟ್ಟಿದ್ದ ಚಿತ್ರದುರ್ಗ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಜಯಭೇರಿ ಬಾರಿಸಿದೆ. ಬಿಜೆಪಿ ಅಭ್ಯರ್ಥಿ ಗೋವಿಂದ ಕಾರಜೋಳ ಅತಿ ಕಡಿಮೆ ಅವಧಿಯಲ್ಲಿ ಕ್ಷೇತ್ರದಲ್ಲಿ ಸಂಪರ್ಕ ಸಾಧಿಸಿದ ಫಲವಾಗಿ ಹೊಸ ಜಿಲ್ಲೆಯಲ್ಲಿ ಪ್ರವೇಶ ಮಾಡಿ ಘಟಾನುಘಟಿ ನಾಯಕರನ್ನು ಮೆಟ್ಟಿ ನಿಂತು ಗೋವಿಂದ ಎಂ ಕಾರಜೋಳ (Chitradurga) 47065 ಸಾವಿರಕ್ಕಿಂತ ಹೆಚ್ಚಿನ ಮತಗಳ ಅಂತರದಿಂದ ಗೆಲುವನ್ನು ಸಾಧಿಸಿದ್ದಾರೆ.

| ಕ್ಷೇತ್ರ | ಕಾಂಗ್ರೆಸ್ | ಬಿಜೆಪಿ | ಲೀಡ್ | ಅಂತರ |
|---|---|---|---|---|
| ಮೊಳಕಾಲ್ಮುರು | 104262 | 78137 | ಕಾಂಗ್ರೆಸ್ | 26125 |
| ಚಳ್ಳಕೆರೆ | 80499 | 78137 | ಕಾಂಗ್ರೆಸ್ | 3525 |
| ಚಿತ್ರದುರ್ಗ | 83547 | 101430 | ಬಿಜೆಪಿ | 17883 |
| ಹೊಳಲ್ಕೆರೆ | 78210 | 95991 | ಬಿಜೆಪಿ | 17781 |
| ಹೊಸದುರ್ಗ | 66565 | 76252 | ಬಿಜೆಪಿ | 9687 |
| ಹಿರಿಯೂರು | 82597 | 88794 | ಬಿಜೆಪಿ | 6197 |
| ಸಿರಾ | 77353 | 89847 | ಬಿಜೆಪಿ | 12494 |
| ಪಾವಗಡ | 61119 | 75792 | ಬಿಜೆಪಿ | 14673 |

**ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಫಲಿತಾಂಶ ಕಾಂಗ್ರೆಸ್ ಶಾಸಕರಿಗೆ, ಸಚಿವರಿಗೆ ಶಾಕ್ ನೀಡಿದೆ. ಕಾಂಗ್ರೆಸ್ ಈ ಗೆಲುವಿನ ವಿಶ್ವಾಸದಲ್ಲಿತ್ತು. ಆದರೆ ಮತದಾರರ ಪ್ರಭುಗಳು ಮಾತ್ರ ಕಮಲಕ್ಕೆ ಜೈ ಅಂದಿದ್ದಾರೆ.**

» **ನಮ್ಮಜನ ಸಮಾಚಾರ ಚಿತ್ರದುರ್ಗ**

ಲೋಕಸಭೆ ಚುನಾವಣೆ ಫಲಿತಾಂಶ ಪ್ರಕಟಗೊಂಡಿದ್ದು, ತೀವ್ರ ಹಣಾಹಣಿ ಏರ್ಪಟ್ಟಿದ್ದ ಚಿತ್ರದುರ್ಗ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಜಯಭೇರಿ ಬಾರಿಸಿದೆ. ಬಿಜೆಪಿ ಅಭ್ಯರ್ಥಿ ಗೋವಿಂದ ಕಾರಜೋಳ ಅತಿ ಕಡಿಮೆ ಅವಧಿಯಲ್ಲಿ ಕ್ಷೇತ್ರದಲ್ಲಿ ಸಂಪರ್ಕ ಸಾಧಿಸಿದ ಫಲವಾಗಿ ಹೊಸ ಜಿಲ್ಲೆಯಲ್ಲಿ ಪ್ರವೇಶ ಮಾಡಿ ಘಟಾನುಘಟಿ ನಾಯಕರನ್ನು ಮೆಟ್ಟಿ ನಿಂತು ಗೋವಿಂದ ಎಂ ಕಾರಜೋಳ 47065 ಸಾವಿರಕ್ಕಿಂತ ಹೆಚ್ಚಿನ ಮತಗಳ ಅಂತರದಿಂದ ಗೆಲುವು ಸಾಧಿಸುವ ಮೂಲಕ ಬಿ.ಎನ್. ಚಂದ್ರಪ್ಪ ಅವರನ್ನು ಸೋಲಿಸಿ ಗೆಲುವಿನ ನಗೆ ಬೀರಿದ್ದಾರೆ.ಚಿತ್ರದುರ್ಗ ಕ್ಷೇತ್ರದಲ್ಲಿ ಪ್ರತಿ ಚುನಾವಣೆಯಲ್ಲಿ ಬಿಜೆಪಿ ತನ್ನ ಕೋಟೆಯನ್ನು ಭದ್ರ ಕೋಟೆಯಾಗಿ ಮಾಡಿಕೊಂಡು ಬರುತ್ತಿದೆ ಎಂಬುದನ್ನು ಮತ್ತೆ ಸಾಬೀತು ಮಾಡಿಕೊಂಡಿದ್ದು ಲೋಕಸಭೆ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಬಿಜೆಪಿ ಕಾಂಗ್ರೆಸ್ ಶಾಕ್ ನೀಡಿದೆ.

ಕಳೆದ ಬಾರಿ ಸಂಸದರಾಗಿ ಕೇಂದ್ರ ಮಂತ್ರಿ ಸಹ ಆಗಿದ್ದ ನಾರಾಯಣಸ್ವಾಮಿ ಅವರಿಗೆ ಆಡಳಿತ ವಿರೋಧಿ ಅಲೆಗೆ ಎದರಿಕೊಂಡು ಹಾಲಿ ಸಂಸದರಾಗಿದ್ದ ನಾರಾಯಣಸ್ವಾಮಿ ಬದಲಿಗೆ ಬಿಜೆಪಿ ಮಾಜಿ ಡಿಸಿಎಂ ಗೋವಿಂದ ಎಂ ಕಾರಜೋಳ ಅವರಿಗೆ ಮಣೆ ಹಾಕಿದ್ದು ಬಿಜೆಪಿಗೆ ವರ್ಕಟ್ ಆಗಿದ್ದು ಕಾರಜೋಳ ಗೆಲುವು ಸಾಧಿಸಿದ್ದಾರೆ.

ಬಿಜೆಪಿ ಪಕ್ಷ ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಸ್ಥಳೀಯ ಹೊಳಲ್ಕೆರೆ ಶಾಸಕ ಎಂ.ಚಂದ್ರಪ್ಪ ಪುತ್ರ ಪ್ರಬಲ ಆಕಾಂಕ್ಷಿಯಾಗಿದ್ದರಿಂದ ಇಲ್ಲಿ ಯಾರನ್ನ ಕಣಕ್ಕೆ ಇಳಿಸಬೇಕು ಎಂಬ ಗೊಂದಲ ಮತ್ತು ಭಿನ್ನಮತದ ನಡುವೆ ಯಡಿಯೂರಪ್ಪ ಅಪ್ತ ಗೋವಿಂದ ಎಂ.ಕಾರಜೋಳ ಅವರಿಗೆ ಟಿಕೆಟ್ ನೀಡಿ ಖುದ್ದು ಯಡಿಯೂರಪ್ಪ ಮತ್ತು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಭಾರೀ ಪ್ರಚಾರ ನಡೆಸುವ ಮೂಲಕ ಇಲ್ಲಿ ಕಾರಜೋಳ ಅಲ್ಲ ಅಭ್ಯರ್ಥಿ ನಾವೇ ಎಂದು ಪ್ರಚಾರ ಮಾಡಿದ್ದು ಫಲವಾಗಿ ಗೋವಿಂದ ಎಂ ಕಾರಜೋಳ ಗೆಲುವು ಸಾಧಿಸಿದ್ದಾರೆ.

**ಗ್ಯಾರೆಂಟಿ ಅಲೆಯಲ್ಲಿ ಗೆದ್ದು ಬೀಗಿದ ಗೋವಿಂದ ಎಂ ಕಾರಜೋಳ:** ರಾಜ್ಯದಲ್ಲಿ ಕಾಂಗ್ರೆಸ್ ಗ್ಯಾರೆಂಟಿ ಒಡೆತಕ್ಕೆ ನಲುಗಿದ್ದ ಬಿಜೆಪಿ ರಾಜ್ಯದಲ್ಲಿ ಗೆಲ್ಲುವುದು ಕಷ್ಟ ಎಂಬ ಮಾತು ಇತ್ತಾದರೂ ಸಹ ಮೋದಿ ನಾಮ ಸ್ಮರಣೆ ಮತ್ತು ಜಾತಿಲೆಕ್ಕಚಾರದ ಗೆಲುವು ಬಿಜೆಪಿಗೆ ದೊರಕಿದೆ. ಗ್ಯಾರೆಂಟಿ ಯೋಜನೆಯ ಫಲ ಕಾಂಗ್ರೆಸ್ ಗೆ ದೊರತಂತೆ ಕಾಣುತ್ತಿಲ್ಲ. ಸಾಕಷ್ಟು ಭರವಸೆ ಮತ್ತು ಕಾಂಗ್ರೆಸ್ ಕೈ ಹಿಡಿಯುವ ವಿಶ್ವಾದಲ್ಲಿದ್ದ ಬಿ.ಎನ್.ಚಂದ್ರಪ್ಪ ಅವರಿಗೆ ಕೊನೆಗೂ ಗೋವಿಂದ ಎಂ ಕಾರಜೋಳ ಅವರು ಚಂದ್ರಪ್ಪ ಅವರನ್ನು ಸೋಲಿಸಿ ಕಾಂಗ್ರೆಸ್ ಗೆ ಶಾಕ್ ನೀಡಿದ್ದಾರೆ.

**ಬಿಜೆಪಿ ಪಕ್ಷಕ್ಕೆ ಪ್ಲಸ್ ಕಾಂಗ್ರೆಸ್ ಗೆ ಮೈನಸ್:** ಕಳೆದ ಬಾರಿ ಲೋಕಸಭೆ ಚುನಾವಣೆಯಲ್ಲಿ ಕೋಟೆ ನಾಡಿನಲ್ಲಿ ಕಮಲ ಹರಳಿತ್ತು. ಈ ಬಾರಿ ಸಹ ಕಮಲಕ್ಕೆ ಮತದಾರರು ಜೈ ಎಂದು ಎಂದು ಆಶೀರ್ವಾದ ಮಾಡಿದ್ದಾರೆ.ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಗೋವಿಂದ ಎಂ ಕಾರಜೋಳ ಗೆಲುವು ಬಿಜೆಪಿ ಪಕ್ಷಕ್ಕೆ ಒಂದು ಸ್ಥಾನವನ್ನು ರಾಜ್ಯದಲ್ಲಿ ತಂದುಕೊಡುವ ಜೊತೆಗೆ ತನ್ನ ಸ್ಥಾನವನ್ನು ಉಳಿಸಿಕೊಂಡಿದೆ.

## ಜಿಲ್ಲೆಯ ಅಭಿವೃದ್ಧಿಗೆ ಶ್ರಮಿಸುತ್ತೇನೆ: ಕಾರಜೋಳ

**ಚಿತ್ರದುರ್ಗ:** ಎಲ್ಲರ ಸಲಹೆ ಸೂಚನೆ ಪಡೆದು ಜಿಲ್ಲೆ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದು ಚಿತ್ರದುರ್ಗ ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದು ಜಯದ ನಗೆ ಬೀರಿದ ನೂತನ ಸಂಸದ ಗೋವಿಂದ ಕಾರಜೋಳ ತಿಳಿಸಿದರು. ನಗರದ ಸರ್ಕಾರಿ ವಿಜ್ಞಾನ ಕಾಲೇಜು ಆವರಣದ ಮತ ಎಣಿಕೆ ಕೇಂದ್ರದಲ್ಲಿ ಫಲಿತಾಂಶ ಘೋಷಣೆಯಾದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪಕ್ಷದ ನಾಯಕರು ನಿರ್ಧಾರ ಮಾಡಿ ಅಭ್ಯರ್ಥಿ ಮಾಡಿದ್ದರು.

ಪುಟ ↘ 2

## ಫಾಸ್ಟ್ ನ್ಯೂಸ್

### ಜಿಲ್ಲೆಯ ಅಭಿವೃದ್ಧಿಗೆ ಶ್ರಮಿಸುತ್ತೇನೆ: ಕಾರಜೋಳ



» ಮೊದಲ ಪುಟದಿಂದ

ನನಗೆ ಸಮಯ ಇರಲಿಲ್ಲ ನಾಮಪತ್ರ ಸಲ್ಲಿಕೆಗೆ ಮಾತ್ರ ಕ್ಷೇತ್ರಕ್ಕೆ ಬಂದೆ. ಮೈತ್ರಿ ಕಾರ್ಯಕರ್ತರು ಶಕ್ತಿ ಹಾಕಿ ಗೆಲ್ಲಿಸಿದ್ದಾರೆ' ಎಂದರು. 'ಮೋದಿ ಮತ್ತೊಮ್ಮೆ ಪ್ರಧಾನಿ ಆಗೋದು ದೇಶದ ಜನರ ಆಶಯ ಇತ್ತು. ಮೋದಿಯನ್ನು ಮೆಚ್ಚಿ ಮೂರನೇ ಬಾರಿಗೆ ಬಹುಮತ ಕೊಟ್ಟಿದ್ದಾರೆ. ನಮ್ಮ ಪಕ್ಷದ ವರಿಷ್ಠರಿಗೆ, ರಾಜ್ಯ ನಾಯಕರಿಗೆ ಮತದಾರರಿಗೆ ಧನ್ಯವಾದ ಸಲ್ಲಿಸುತ್ತೇನೆ' ಎಂದು ತಿಳಿಸಿದರು. 'ಜನರ ಆಸೆ ಇದು ಜಿಲ್ಲೆಯ ಅಭಿವೃದ್ಧಿ ಆಗಬೇಕು ಅಂತ. ಬೇಕು ಬೇಡಿಕೆಗಳ ಅರಿತು ಕೇಂದ್ರದಿಂದ ಏನು ಆಗಬೇಕು ಅದನ್ನು ಮಾಡುತ್ತೇನೆ. ಜಿಲ್ಲೆಗೆ ಹೊಸ ಮುಖ ಆಗಿದ್ದರು ಸಹ ವಿಶ್ವಾಸ ಇಟ್ಟು ಆಯ್ಕೆ ಮಾಡಿದ್ದಾರೆ. ಜಿಲ್ಲೆಯಲ್ಲಿ ನನಗೆ ಸಾಕಷ್ಟು ವಿರೋಧ ಇರಲಿಲ್ಲ. ಪಕ್ಷದ ಅಧ್ಯಕ್ಷರು ಎಲ್ಲರೂ ಸಹಕಾರ ನೀಡಿದರು' ಎಂದರು.

### ಜೂನ್ 5ರಂದು ಪರಿಸರ ಜಾಥಾ

» ಚಿತ್ರದುರ್ಗ

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ನಗರಸಭೆ ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ಪರಿಸರ ದಿನಾಚರಣೆ-2024 ಅಂಗವಾಗಿ ನಗರದ ಜಿಲ್ಲಾಧಿಕಾರಿಗಳ ಕಚೇರಿ ಹತ್ತಿರದ ಒನಕೆ ಒಬವ್ವ ವೃತ್ತದಲ್ಲಿ ಇದೇ ಜೂನ್ 5ರಂದು ಬೆಳಿಗ್ಗೆ 10.30ಕ್ಕೆ ಪರಿಸರ ಜಾಥಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ವಿಜಯ್ ಹಾಗೂ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ದಾವಣಗೆರೆ ವಲಯ ಹಿರಿಯ ಪರಿಸರ ಅಧಿಕಾರಿ ರಮೇಶ್ ಡಿ ನಾಯಕ್, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ.ನಾಸಿರುದ್ದೀನ್ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

### ಬಿ.ಐ.ಇ.ಆರ್.ಟಿ ಹುದ್ದೆಗೆ ಅರ್ಜಿ

ಚಿತ್ರದುರ್ಗ: 2024-25ನೇ ಸಾಲಿಗೆ ಜಿಲ್ಲೆಯಲ್ಲಿ ಖಾಲಿ ಇರುವ ಪ್ರಾಥಮಿಕ ಮತ್ತು ಪ್ರೌಢ ಬಿ.ಐ.ಇ.ಆರ್.ಟಿ ಹುದ್ದೆಗೆ ಸ್ಪೆಷಲ್ ಡಿ.ಇಡಿ ಹಾಗೂ ಬಿ.ಎಡ್ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಂದ ನೇರಗುತ್ತಿಗೆ ಮೂಲಕ ತಾತ್ಕಾಲಿಕ ಸೇವೆ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಮತ್ತು ಅರ್ಹ ಅಭ್ಯರ್ಥಿಗಳು ಇದೇ ಜೂನ್ 7ರ ಸಂಜೆ 5 ಗಂಟೆಯೊಳಗೆ ಭರ್ತಿ ಮಾಡಿದ ಅರ್ಜಿಗಳನ್ನು ಉಪನಿರ್ದೇಶಕರು (ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾಧಿಕಾರಿಗಳ ಕಚೇರಿ, ಸಮಗ್ರ ಶಿಕ್ಷಣ ಕರ್ನಾಟಕ ಶಾಲಾ ಶಿಕ್ಷಣ ಇಲಾಖೆ, ಚಿತ್ರದುರ್ಗ ಕಚೇರಿಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಇಲಾಖೆಗೆ ಅಥವಾ ದೂರವಾಣಿ ಸಂಖ್ಯೆ 8747912806 ಮತ್ತು 8073269824 ಗೆ ಸಂಪರ್ಕಿಸಬಹುದು

### ಪ್ರತಿಭಾಪುರಸ್ಕಾರ 8ರಂದು

» ಚಳ್ಳಕೆರೆ

ನಗರದ ವಾಸವಿ ಯುವಜನ ಸಂಘ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಪ್ರತಿಭಾಪುರಸ್ಕಾರ ಕಾರ್ಯಕ್ರಮವನ್ನು ಜೂನ್.8ರ ಶನಿವಾರ ಬೆಳಗ್ಗೆ 10.30ಕ್ಕೆ ಬೆಂಗಳೂರು ರಸ್ತೆಯ ಅನಂತಜೈನ ಭವನದಲ್ಲಿ ಹಮ್ಮಿಕೊಂಡಿದೆ ಎಂದು ಯುವಜನ ಸಂಘದ ಅಧ್ಯಕ್ಷ ಆರ್. ಚೇತನ್‌ಕುಮಾರ್ ತಿಳಿಸಿದ್ದಾರೆ. ಅವರು, ಈ ಬಗ್ಗೆ ಮಾಹಿತಿ ನೀಡಿ, ಎಸ್‌ಎಸ್‌ಎಲ್‌ಸಿಯಲ್ಲಿ ಶೇ.90, ದ್ವಿತೀಯ ಪಿಯುಸಿಯಲ್ಲಿ ಶೇ.85 ಅಂಕ ಪಡೆದ ತಾಲ್ಲೂಕಿನ ಎಲ್ಲಾ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಅಂಕಪಟ್ಟಿ ಹಾಗೂ ಮಾಹಿತಿಯನ್ನು ಕೂಡಲೇ ವಾಸವಿಮಹಲ್‌ನಲ್ಲಿರುವ ಯುವ ಜನಸಂಘದ ಕಾರ್ಯಾಲಯಕ್ಕೆ ತಲುಪಿಸುವಂತೆ ಮನವಿ ಮಾಡಿದೆ. ಕಾರ್ಯಕ್ರಮದ ಉದ್ಘಾಟನೆಯನ್ನು ಡಿಆರ್‌ಡಿಒ ತಾಂತ್ರಿಕ ಅಧಿಕಾರಿಗಳ ಸಂಘದ ಉಪಾಧ್ಯಕ್ಷ ಎಸ್.ಎಸ್.ಬಿ.ನಾಯಕ್ ಉದ್ಘಾಟಿಸಲಿದ್ದು, ಆರ್ಯವೈಶ್ಯ ಸಂಘದ ಅಧ್ಯಕ್ಷ ಬಿ.ಎಂ.ಕೃಷ್ಣಮೂರ್ತಿ ಸೇರಿದಂತೆ ಹಲವಾರು ಮುಖಂಡರುಕಾರ್ಯಕ್ರಮದಲ್ಲಿಭಾಗವಹಿಸುವರು. ಹೆಚ್ಚಿನ ಮಾಹಿತಿಗಾಗಿ ರಾಕೇಶ್-99452 94668, ರವಿ-99869 24392 ಸಂಪರ್ಕಿಸಲು ಕೋರಿದೆ.

# ಸೋಲು ಗೆಲುವು ಸಹಜ; ಧೃತಿಗೆಡದೆ ಪಕ್ಷ ಸಂಘಟನೆ ಮಾಡಿ ಸ್ಥಳೀಯ ಸಂಸ್ಥೆ ಚುನಾವಣೆಗೆ ಸಿದ್ಧರಾಗೋಣ

» ಚಿತ್ರದುರ್ಗ

ಅಭ್ಯರ್ಥಿ ಚಂದ್ರಪ್ಪನವರ ಅನಿರೀಕ್ಷಿತ ಸೋಲಿನಿಂದ ಬೇಸರವಾಗಿದೆ. ಆದರೆ ಚುನಾವಣೆಗಳಲ್ಲಿ ಸೋಲು ಗೆಲುವು ಸಹಜ. ಮುಖಂಡರು, ಕಾರ್ಯಕರ್ತರು ಧೃತಿಗೆಡದೆ ಪಕ್ಷ ಸಂಘಟನೆ ಮಾಡಿ ಮುಂದಿನ ಸ್ಥಳೀಯ ಸಂಸ್ಥೆ ಚುನಾವಣೆಗಳಿಗೆ ಸಿದ್ಧರಾಗಬೇಕಿದೆ ಎಂದು ಮಾಜಿ ಸಚಿವ ಹೆಚ್. ಆಂಜನೇಯ ಅವರು ತಿಳಿಸಿದರು.



ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಶ್ರೀ ಬಿ.ಎನ್.ಚಂದ್ರಪ್ಪನವರು ಚುನಾವಣೆಯಲ್ಲಿ ಸೋತ ನಂತರ ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ನಡೆದ ಸಮಾಲೋಚನಾ ಸಭೆಯಲ್ಲಿ ನೆರೆದಿದ್ದ ಮುಖಂಡರು ಮತ್ತು ಕಾರ್ಯಕರ್ತರನ್ನು ಕುರಿತು ಮಾತನಾಡಿದ ಮಾಜಿ ಸಚಿವರು ಚಂದ್ರಪ್ಪನವರು ಅನ್ಯ ಪಕ್ಷದವರೂ ಮೆಚ್ಚುವಂತಹ ಗುಣ ಸ್ವಭಾವದವರಾಗಿದ್ದರು. ಸೋಲುವ ನಿರೀಕ್ಷೆ ಇರಲಿಲ್ಲ. ಸಂಪೂರ್ಣ ಗೆಲ್ಲುವ ವಾತಾವರಣವೂ ಇತ್ತು. ಜಿಲ್ಲಾ ಸಚಿವರಾದಿಯಾಗಿ ಎಲ್ಲ ಶಾಸಕರು, ಮುಖಂಡರು, ಕಾರ್ಯಕರ್ತರು ತುಂಬ ಶ್ರಮವಹಿಸಿ ಚುನಾವಣೆಯಲ್ಲಿ ಕೆಲಸ ಮಾಡಿದ್ದರು. ಆದರೂ ಸೋತಿದ್ದೇವೆ. ಜನರ ಮನಸ್ಥಿತಿಯನ್ನು ಗ್ರಹಿಸುವುದೇ ಕಷ್ಟವಾಗಿದೆ.ಆದರೂ ಜನರನಿರ್ಧಾರವನ್ನು ಸ್ವೀಕರಿಸಿ, ಎಲ್ಲಿ ತಪ್ಪುಗಳಾಗಿವೆ ಎಂಬುದನ್ನು ಪತ್ತೆ ಹಚ್ಚಿ ಮತ್ತೆ ಪಕ್ಷ ಸಂಘಟನೆ ಮಾಡುವ ಕೆಲಸ ಮಾಡಬೇಕಿದೆ. ಈ ಅನಿರೀಕ್ಷಿತ ಸೋಲಿನಿಂದ ಮುಖಂಡರಿಗೆ, ಕಾರ್ಯಕರ್ತರಿಗೆ ನೋವಾಗಿರುವುದು ಸಹಜ. ಯಾರೂ ಎದೆಗುಂದುವ ಅವಶ್ಯಕತೆ ಇಲ್ಲ. ಮುಂದೆ ತಾಲ್ಲೂಕು, ಜಿಲ್ಲಾ ಪಂಚಾಯತ್ ಚುನಾವಣೆಗಳು ಬರಲಿದ್ದು ನಾವೆಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡೋಣ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷರಾದ ಎಮ್.ಕೆ.ತಾಜ್ ಪೀರ್,ಜಿಲ್ಲಾ ಸಚಿವರಾದ ಡಿ.ಸುಧಾಕರ್, ಅಭ್ಯರ್ಥಿ ಬಿ.ಎನ್.ಚಂದ್ರಪ್ಪ ಶಾಸಕರಾದ ರಘುಮೂರ್ತಿ,ದ್ರಾಕ್ಷಾರಸ ಮಂಡಳಿ ಅಧ್ಯಕ್ಷರಾದ ಯೋಗೀಶ್ ಬಾಬು, ಜಿ.ಎಸ್.ಮಂಜುನಾಥ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹನುಮಲಿ ಷಣ್ಮುಖಪ್ಪ ಮುಂತಾದವರು ಹಾಜರಿದ್ದರು.

# ಜನಪರ ಆಡಳಿತಕ್ಕೆ ಬೇಕಿತ್ತು ಗೆಲುವಿನ ಮುದ್ರೆ

## ಮತದಾರರತೀರ್ಪಿಗೆತಲೆಬಾಗುವೆ - ಸೋಲಿಗೆ ಅಂಜದೆಕ್ಷೇತ್ರದಜನರೊಂದಿಗೆ ಹೆಜ್ಜೆ ಹಾಕುವೆ

» ಚಿತ್ರದುರ್ಗ

ಉತ್ತಮ ಆಡಳಿತ ನೀಡಿದರೂ ಸೋಲು, ಮತ್ತೊಂದುಕಡೆ ಸುಳ್ಳನ್ನೇ ಸತ್ಯಎಂದು ಬಿಂಬಿಸುವ ವರ್ಗಕ್ಕೆಜಯ.ಇದೊಂದು ಸಂದಿಗ್ಧ ಪರಿಸ್ಥಿತಿ ಎಂದುಕಾಂಗ್ರೆಸ್‌ಅಭ್ಯರ್ಥಿ, ಮಾಜಿ ಸಂಸದ ಬಿ.ಎನ್.ಚಂದ್ರಪ್ಪತಮ್ಮ ಸೋಲನ್ನು ವಿಮರ್ಶಿಸಿದ್ದಾರೆ.

ಮಂಗಳವಾರ ಚಿತ್ರದುರ್ಗ ಲೋಕಸಭಾಕ್ಷೇತ್ರದ ಫಲಿತಾಂಶ ಪ್ರಕಟ ಬಳಿಕ ಪತ್ರಿಕಾ ಹೇಳಿಕೆ ನೀಡಿರುವಅವರು, ಜನ ನೀಡಿರುವತೀರ್ಪಿಗೆತಲೆಬಾಗುವೆಎಂದು ಹೇಳಿದ್ದಾರೆ.

2019ರ ಚುನಾವಣೆಯಲ್ಲಿ ಸೋಲು ಬಳಿಕ ಕ್ಷೇತ್ರದಜನರೊಂದಿಗೆ ಸದಾ ಸಂಪರ್ಕ ಹೊಂದಿದ್ದೇ.ಪಕ್ಷದಕಾರ್ಯಕರ್ತರು, ಕ್ಷೇತ್ರದಜನರಎಲ್ಲ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದೇ.ಚಿತ್ರದುರ್ಗ ಕ್ಷೇತ್ರವನ್ನೇತನ್ನಕರ್ಮಭೂಮಿಎಂದು ಭಾವಿಸಿ, ಜನರೊಂದಿಗೆ ನಾನು ಒಬ್ಬನಾಗಿಕ್ಷೇತ್ರದಾದ್ಯಂತ ಕಾಲಿಗೆ ಚಕ್ರಕಟ್ಟಿಕೊಂಡವನಂತೆಓಡಾಡಿದೆ. ಜನರುಕೂಡ ಪ್ರೀತಿತೋರಿದ್ದರು. ಆದರೆ, ಜನರ ಪ್ರೀತಿ-ಅಭಿಮಾನ ಗೆಲುವಾಗಿ ಪರಿವರ್ತನೆಆಗಿಲ್ಲ. ಈ ನೋವು ನನ್ನಲ್ಲಿದೆ. ಹಾಗೇಂದು ನಾನು ಧೃತಿಗೆಡುವುದಿಲ್ಲ. ಆರು ಲಕ್ಷಕ್ಕಿಂತಲೂ ಹೆಚ್ಚು ಜನ ನನಗೆ ಮತ ಹಾಕಿರುವುದು, ಅವರಿಗೆಋಣಿಆಗಿರುವುದು ನನ್ನಕರ್ತವ್ಯಎಂದು ತಿಳಿಸಿದ್ದಾರೆ. ಸಮೀಕ್ಷೆಗಳನ್ನು ಸುಳ್ಳಾಗಿಸಿ ದೇಶದಲ್ಲಿಇಂಡಿಯಾಒಕ್ಕೂಟ ಹೆಚ್ಚು ಸ್ಥಾನ ಪಡೆದಿದ್ದು, ಅಧಿಕಾರದ ಹೊಸ್ತಲಲ್ಲಿ ಇದೆ. ಜೊತೆಗೆರಾಜ್ಯದಲ್ಲಿಕಾಂಗ್ರೆಸ್ ಆಡಳಿತ ಇದೆ. ಇದನ್ನು ಬಳಸಿಕೊಂಡು ಕ್ಷೇತ್ರದಅಭಿವೃದ್ಧಿಗೆ ಶ್ರಮಿಸುವೆಎಂದಿದ್ದಾರೆ.

ಸೋಲಿಗೆ ಅಂಜದೇಕ್ಷೇತ್ರದಜನರೊಂದಿಗೆ ಹೆಜ್ಜೆ ಹಾಕುವೆ. ಭದ್ರಾ ಮೇಲ್ದಂಡೆ, ನೇರರೈಲು ಮಾರ್ಗ, ಸರ್ಕಾರಿ ಮೆಡಿಕಲ್‌ಕಾಲೇಜು ಹೀಗೆ ಅನೇಕ ಯೋಜನೆಗಳು ನನ್ನಅಧಿಕಾರವಧಿಯಲ್ಲಿ ಹೆಚ್ಚು ವೇಗ ಪಡೆದಿದ್ದು, ಅವುಗಳನ್ನು ಈ ಬಾರಿ ಸಂಸದನಾಗಿ ಪೂರ್ಣಗೊಳಿಸುವ ಮಹಾದಾಸೆನನ್ನದಾಗಿತ್ತು.ಆದರೆ, ಜನರತೀರ್ಪು ವ್ಯತಿರಿಕ್ತವಾಗಿ ಬಂದಿದೆ.ಅದನ್ನು ಸ್ವೀಕರಿಸುವ



ಜೊತೆಗೆಈಯೋಜನೆಗಳನ್ನುಪೂರ್ಣಗೊಳಿಸುವ ಜೊತೆಗೆ ಶಿಕ್ಷಣ, ಕೈಗಾರಿಕೆ, ದುಡಿಯುವಜನರ ಕೈಗೆ ಕೆಲಸ ದೊರೆಯುವರೀತಿರಾಜ್ಯ ಸರ್ಕಾರದ ಜೊತೆಗೂಡಿಕೇಂದ್ರದ ಮೇಲೆ ಒತ್ತಡತಂದು ಯೋಜನೆಗಳನ್ನು ತರುವ ಪ್ರಯತ್ನ ಮಾಡುವೆಎಂದು ಹೇಳಿದ್ದಾರೆ. ಯಾವುದೇ ಕಾರಣಕ್ಕೂ ಸೋಲನ್ನು ಮುಂದಿಟ್ಟುಕೊಂಡು ಹೊಣೆಗಾರಿಕೆ ಯಿಂದ ನುಣಚಿಕೊಳ್ಳುವ ಸಣ್ಣ ಪ್ರಯತ್ನವನ್ನು ಮಾಡುವುದಿಲ್ಲ. ಅದು ನನ್ನಗುಣವೂಅಲ್ಲ. ಸೋಲು-ಗೆಲುವು ಮತ್ತು ಸಾಮಾಜಿಕಕಾರ್ಯಕ್ಕೂ ಸಂಬಂಧವಿಲ್ಲ ಎಂದು ಹೇಳಿದ್ದಾರೆ.ರಾಜ್ಯದಲ್ಲಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ನೇತೃತ್ವದಕಾಂಗ್ರೆಸ್ ಸರ್ಕಾರ, ದೇಶದಯಾವುದೇರಾಜ್ಯದಲ್ಲಿ ಮಾಡದಜನಪರ ಕಾರ್ಯಗಳನ್ನು ಮಾಡಿದೆ. ಅದರಲ್ಲೂ ಪಂಚ ಗ್ಯಾರಂಟಿಗಳು ಜನರ ಮನಸ್ಸನ್ನುಗೆದ್ದಿದ್ದು, ಕೋಟ್ಯಂತರಜನ ಫಲಾನುಭವಿ ಆಗಿದ್ದಾರೆ. ಸಹಜವಾಗಿ ಮಾಡಿದ ಕೆಲಸಕ್ಕೆ ಕಾಂಗ್ರೆಸ್ ಪಕ್ಷ ಕೂಲಿ ಕೇಳುವುದು, ಫಲಾನುಭವಿಗಳಾದ ಜನರುಕೂಡ ಮತದಾನದ ಮೂಲಕ ಕೂಲಿ ಕೊಡುವುದು ಪದ್ಧತಿ. ಆದರೆ, ಈ ವಿಷಯದಲ್ಲಿ ಲೋಪವಾಗಿರುವುದುವಿಮರ್ಶೆಗೊಳಪಡಿಸಬೇಕಾದ ಸಂದರ್ಭಎದುರಾಗಿದೆಎಂದಿದ್ದಾರೆ.

ಸಮಾಜದಲ್ಲಿಧ್ವನಿಯಿಲ್ಲದಕೋಟ್ಯಂತರ ಬಡವರು, ನೊಂದಜನರ ಪರಯೋಜನೆ ರೂಪಿಸಿದಾಗ, ಬೆರಳೆಣಿಕೆ ಸಂಖ್ಯೆಯಲ್ಲಿರುವ ಉಳ್ಳವರು ಅಸೂಯೆ ಪಟ್ಟು, ಯೋಜನೆ ರೂಪಿಸಿದವರ ವಿರುದ್ಧವೇಎಲ್ಲ ಕ್ಷೇತ್ರಗಳ ಜನರನ್ನುಎತ್ತಿಕಟ್ಟುವುದು ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿದೆ. ಈಗ ಆಗಿರುವುದುಕೂಡಅದೇರೀತಿಎಂದು ಹೇಳಿದ್ದಾರೆ.

ಶತಮಾನಗಳ ಹಿಂದಿನಿಂದಲೂಯಾರೂತಮ್ಮ ಪರ ಹೋರಾಟ ನಡೆಸುತ್ತಾರೆಅಂತಹವರ ಪರಜನ ಹೆಚ್ಚು ಪ್ರೀತಿ-ಅಭಿಮಾನ ಹೊಂದಿರುತ್ತಾರೆ.ಆದರೆ, ಪಟ್ಟಭದ್ರರಆರ್ಭಟಕ್ಕೆ ಭೀತಿಗೊಂಡು ಹೊರಬರುವುದಿಲ್ಲ. ಬಹಿರಂಗವಾಗಿ ಬೆಂಬಲಕ್ಕೆ ನಿಲ್ಲುವುದಿಲ್ಲ. ಇದೇಕಾರಣಕ್ಕೆ ಬಹಳಷ್ಟು ಜನಪರಚಿಂತಕರು, ಉತ್ತಮ ಆಡಳಿತಗಾರರು ಸೋಲುಂಡ ಕಹಿನೆನಪು ಇತಿಹಾಸದಲ್ಲಿದಾಖಲಾಗಿದೆ. ಅಂತಹ ದಿಗ್ಗಜರಇತಿಹಾಸದಅರಿವು ನನಗಿರುವಕಾರಣಕ್ಕೆ ಈ ಸೋಲು ನನ್ನನ್ನು ಸಣ್ಣದಾಗಿಯೂಧೃತಿಗೆಡಿಸುವುದಿಲ್ಲ ಎಂದು ಹೇಳಿದ್ದಾರೆ. ಸಂಸದನಾಗಿದ್ದಾಗಅನುದಾನವನ್ನುಜಾತ್ಯತೀತವಾಗಿ, ಸಣ್ಣ ಭ್ರಷ್ಟಾಚಾರ ಹತ್ತಿರ ಸುಳಿಯದಂತೆ ಹಂಚಿಕೆ ಮಾಡಿದ್ದೇನೆ. ಜೊತೆಗೆ ಸೋತ ಬಳಿಕ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷನಾಗಿದ್ದ ಸಂದರ್ಭ ನನ್ನ ಹುಟ್ಟುಗುಣ ಸಜ್ಜನಿಕೆ, ಸೌಜನ್ಯ, ಸರಳತೆಗೆ ಧಕ್ಕೆ ಬಾರದರೀತಿ ನಡೆದುಕೊಂಡಿದ್ದೇನೆ. ಇಂತಹ ಸಂದರ್ಭ ಸೋಲು ಆಗಿರುವುದುರಾಜಕಾರಣದ ಮರುವಿಮರ್ಶೆ ಮಾಡುವಚಿಂತನೆಗೆಎಡೆಮಾಡಿಕೊಟ್ಟಿದೆಎಂದು ತಿಳಿಸಿದ್ದಾರೆ. ಕ್ಷೇತ್ರದಲ್ಲಿನ ಪಕ್ಷದಕಾರ್ಯಕರ್ತರು, ಶಾಸಕರು, ಸಚಿವರು, ಮುಖಂಡರು ನನ್ನ ಗೆಲುವಿಗೆ ಟೊಂಕಕಟ್ಟಿ ಶ್ರಮಿಸಿದ್ದಾರೆ. ಅವರುಗಳು ಯಾವುದೇಕಾರಣಕ್ಕೂ ನೊಂದುಕೊಳ್ಳಬೇಕಿಲ್ಲ. ಕ್ಷೇತ್ರದಲ್ಲಿದ್ದು ನೊಂದ ಜನರ ಹಾಗೂ ಕ್ಷೇತ್ರದ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ರಾಜಕಾರಣದಲ್ಲಿ ಸಂತೃಪ್ತಿಕಾಣುವ ಮನೋಭಾವ ಹೆಚ್ಚಿಸಿಕೊಳ್ಳ ಬೇಕು, ಜನರಿಗೆ ಒಳಿತು ಮಾಡುವ ಮೂಲಕ ಕಹಿ ಘಟನೆಗಳನ್ನು ಮರೆಯಬೇಕು ಎಂಬುದು ನನ್ನಾಸೆ. ಆದ್ದರಿಂದ ಫಲಿತಾಂಶವನ್ನು ಮರೆತು ಪಕ್ಷ ಸಂಘಟನೆ ಕ್ಷೇತ್ರದಅಭಿವೃದ್ಧಿಗೆ ನಾವೆಲ್ಲರೂ ಶ್ರಮಿಸೋಣೋ.

### ಬಿಜೆಪಿ ಗೆಲವು: ವಿಜಯೋತ್ಸವ



» ಹೊಳಲ್ಕೆರೆ

ದೇಶ ಹಾಗೂ ರಾಜ್ಯದಲ್ಲಿ ಬಿಜೆಪಿ ಪಕ್ಷ ಹೆಚ್ಚು ಸ್ಥಾನ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಪುರಸಭಾ ಸದಸ್ಯರಾದ ಹೆಚ್. ಆರ್.ನಾಗರಾತ್ನವೇದಮೂರ್ತಿ ಜನರಿಗೆ ಸಿಹಿ ಹಂಚಿಕೆ ಮಾಡುವ ಮೂಲಕ ವಿಜಯೋತ್ಸವದ ಆಚರಣೆ ಮಾಡಿದರು. ದೇಶದಲ್ಲಿ ಬಿಜೆಪಿ ಪಕ್ಷದ 3 ನೇ ಭಾರಿಗೆ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಕೇಂದ್ರ ಸರ್ಕಾರ ಅಧಿಕಾರ ಬರುವುದು ಖಚಿತವಾಗಿದೆ. ರಾಜ್ಯದಲ್ಲಿ ಬಿ.ಎಸ್. ಯಡಿಯೂರಪ್ಪ ಹಾಗೂ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ರಾಜ್ಯದಲ್ಲಿ ಹೆಚ್ಚು ಸ್ಥಾನವನ್ನು ಪಡೆದಿದೆ. ಚಿತ್ರದುರ್ಗ ಸಂಸದರಾಗಿ ಗೋವಿಂದ ಕಾರ್ ಜೋಳ ಗೆಲುವು ಸಾಧಿಸಿದ್ದಾರೆ.ಬಿಜೆಪಿ ಪಕ್ಷದ ಗೆಲುವಿಗೆ ಶ್ರಮಿಸಿದ ಪಕ್ಷದ ಶಾಸಕರಿಗೆ, ಮುಖಂಡರಿಗೆ, ಕಾರ್ಯಕರ್ತ ರಿಗೆ, ಮತದಾರರಿಗೆ ಅಭಿನಂದಿಸುವುದಾಗಿ ತಿಳಿಸಿದ್ದಾರೆ.

### ಬಿ.ಎನ್.ಚಂದ್ರಪ್ಪ ಸೋಲು ಅನಿರೀಕ್ಷಿತ; ಎಚ್.ಆಂಜನೇಯ

» ಚಿತ್ರದುರ್ಗ

ಚುನಾವಣೆಗಳಲ್ಲಿ ಸೋಲು-ಗೆಲುವು ಸಹಜ.ಆದರೆ, ಚಿತ್ರದುರ್ಗ ಲೋಕಸಭಾಕಾಂಗ್ರೆಸ್‌ಅಭ್ಯರ್ಥಿ ಬಿ.ಎನ್.ಚಂದ್ರಪ್ಪನವರ ಸೋಲು ಅನಿರೀಕ್ಷಿತಎಂದುಮಾಜಿ ಸಚಿವಹೆಚ್.ಆಂಜನೇಯ ಹೇಳಿದ್ದಾರೆ. ಚಿತ್ರದುರ್ಗ ಲೋಕಸಭಾಕ್ಷೇತ್ರದ ಫಲಿತಾಂಶ ಪ್ರಕಟವಾದಬಳಿಕ ಪತ್ರಿಕಾ ಹೇಳಿಕೆ ನೀಡಿರುವಆಂಜನೇಯ, ಕಾಂಗ್ರೆಸ್ ಪಕ್ಷದಅಭ್ಯರ್ಥಿ ಬಿ.ಎನ್. ಚಂದ್ರಪ್ಪಅನ್ಯ ಪಕ್ಷದವರೂ ಮೆಚ್ಚುವಂತಹಗುಣ ಸ್ವಭಾವ ಹೊಂದಿದ್ದರು. ಈ ಬಾರಿಯಚುನಾವಣೆಯಲ್ಲಿ ಪರಾಭವಗೊಳ್ಳುವ ನಿರೀಕ್ಷೆಇರಲಿಲ್ಲ. ಎಲ್ಲ ಮತಕ್ಷೇತ್ರದಲ್ಲಿಸಂಪೂರ್ಣಗೆಲ್ಲುವ ವಾತಾವರಣವಿತ್ತು.ಜಿಲ್ಲಾ ಸಚಿವರು ಸೇರಿದಂತೆಎಲ್ಲ ಶಾಸಕರು, ಮುಖಂಡರು, ಕಾರ್ಯಕರ್ತರುಚುನಾವಣೆಯಲ್ಲಿಉತ್ತಮಕೆಲಸ ಮಾಡಿದ್ದರು. ಆದರೂಪರಾಭವಗೊಂಡಿದ್ದೇವೆ. ಅನಿರೀಕ್ಷಿತ ಸೋಲಿನಿಂದಮುಖಂಡರಿಗೆ, ಕಾರ್ಯಕರ್ತರಿಗೆ ನೋವಾಗಿರುವುದು ಸಹಜ. ಯಾರೂಎದೆಗುಂದುವಅವಶ್ಯಕತೆ ಇಲ ಎಂದರು.

## ಪ್ರಮುಖ ಸುದ್ದಿ

### ಚಿತ್ರದುರ್ಗ ಲೋಕಸಭಾ ಕ್ಷೇತ್ರ: ಗೋವಿಂದಕಾರಜೋಳ ಕಮಾಲ್

# ಮೊದಲ ಪ್ರಯತ್ನದಲ್ಲೇ ಯಶಸ್ಸು ಕಂಡ ಕಾರಜೋಳ

» ಚಳ್ಳಕೆರೆ

ಕರ್ನಾಟಕ ರಾಜ್ಯದ ದಲಿತ ಸಮೂಹದ ಹಿರಿಯ ನಾಯಕ, ಮಾಜಿ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಮೊದಲ ಬಾರಿಗೆ ಚಿತ್ರದುರ್ಗ ಲೋಕಸಭಾ ಕ್ಷೇತ್ರದಿಂದ ಗೆಲುವು ಸಾಧಿಸಿ ಸಂಸತ್ ಭವನ ಪ್ರವೇಶಿಸುತ್ತಿರುವುದು ಸಂತಸ ತಂದಿದೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಪ್ರಾಮಾಣಿಕ ಸೇವೆ ಸಲ್ಲಿಸುತ್ತಾರೆಂಬ ಭರವಸೆ ಎಲ್ಲರಿಗೂ ಇದೆ ಎಂದು ಬಿಜೆಪಿ ಮಂಡಲಾಧ್ಯಕ್ಷ ಸೂರನಹಳ್ಳಿಶ್ರೀನಿವಾಸ್ ತಿಳಿಸಿದರು.





ಅವರು, ಮಂಗಳವಾರ ಇಲ್ಲಿನ ನೆಹರೂ ಸರ್ಕಲ್ ಮತ್ತು ವಾಲ್ಮೀಕಿ ವೃತ್ತದಲ್ಲಿ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಸಂಸತ್ ಸದಸ್ಯರಾಗಿ ಆಯ್ಕೆಯಾದ ಗೋವಿಂದಕಾರಜೋಳ ಗೆಲುವನ್ನು ಪಟಾಕಿ ಸಿಡಿಸುವ ಮೂಲಕ ಸಂಭ್ರಮಿಸಿ ನೆರೆದಿದ್ದ ಕಾರ್ಯಕರ್ತರುನ್ನು ಉದ್ದೇಶಿಸಿ ಮಾತನಾಡಿದರು. ಕಳೆದ 2019ರ ಚುನಾವಣೆಯಲ್ಲೂ ಸಹ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಮತದಾರರು ಎ.ನಾರಾಯಣಸ್ವಾಮಿಯವರಿಗೆ ಗೆಲುವಿನ ಕೊಡುಗೆ ನೀಡಿ ಕೇಂದ್ರದ ಸಚಿವರಾಗಿ ಕಾರ್ಯನಿರ್ವಹಿಸುವ ಅವಕಾಶವನ್ನು ಮಾಡಿಕೊಟ್ಟಿದ್ದರು. ಈ ಬಾರಿಯೂ ಸಹ ಎರಡನೇ ಬಾರಿಗೆ ಬಿಜೆಪಿಗೆ ಅವಕಾಶ ಮಾಡಿಕೊಟ್ಟಿರುವ ಮತದಾರರ ಇಚ್ಛೆಯೂ ಸಹ ಗೋವಿಂದಕಾರಜೋಳ ಕೇಂದ್ರ ಸಚಿವರಾಗಿಲಿ ಎಂಬ ಅಭಿಲಾಷೆ ಹೊಂದಿದ್ದಾರೆ. ವಿಶೇಷವಾಗಿ ಚಳ್ಳಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಗೋವಿಂದಕಾರಜೋಳರವರ ಗೆಲುವಿಗೆ ಹೆಚ್ಚಿನ ಮತ ನೀಡಿದ ಕ್ಷೇತ್ರದ ಎಲ್ಲಾ ಮತದಾರರಿಗೆ ಚುನಾವಣೆ ಸಂದರ್ಭದಲ್ಲಿ ಕಾರ್ಯನಿರ್ವಹಿಸಿದ ಎಲ್ಲಾ ಹಂತದ ಮುಖಂಡರು ಹಾಗೂ ಕಾರ್ಯಕರ್ತರಿಗೆ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು. ಜೆಡಿಎಸ್ ಮೈತ್ರಿ ಈ ಗೆಲುವಿಗೆ ಪ್ರಮುಖವಾಗಿದೆ ಎಂದರು.

ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಪಿ.ತಿಪ್ಪೇಸ್ವಾಮಿ ಮಾತನಾಡಿ, ಚಿತ್ರದುರ್ಗ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿಕೂಟ ಮೊದಲ ಹಂತದಲ್ಲೇ ಗೆಲುವು ಸಾಧಿಸುವ ಮೂಲಕ ಮೈತ್ರಿಕೂಟಕ್ಕೆ ಉತ್ತಮ ಭವಿಷ್ಯವಿದೆ ಎಂಬುವುದನ್ನು ಗೆಲುವು ನಿರೂಪಿಸಿದೆ. ಅಭ್ಯರ್ಥಿಯಾಗಿ ಕೇವಲ ಬಂದೂವರೆ ತಿಂಗಳ ಅವಧಿಯಲ್ಲಿ ಗೋವಿಂದಕಾರಜೋಳರವರು ಇಡೀ ಕ್ಷೇತ್ರವನ್ನು ಹಗಲುರಾತ್ರಿ ಸುತ್ತಿ ಕ್ಷೇತ್ರದ ಮತದಾರರವಿಶ್ವಾಸವನ್ನುಗಟ್ಟಿಗೊಳಿಸಿದರು. ಪ್ರಧಾನಮಂತ್ರಿ ನರೇಂದ್ರಮೋದಿಯವರ ಯೋಜನೆಗಳು, ರಾಜ್ಯದ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಜಾರಿಗೆ ತಂದ ಅನೇಕ ಕಾರ್ಯಕ್ರಮಗಳು ಈ ಗೆಲುವಿಗೆ ಸಹಕಾರಿಯಾಗಿವೆ. ಬಿಜೆಪಿ ಪಕ್ಷದ ಎಲ್ಲಾ ಮುಖಂಡರು, ಕಾರ್ಯಕರ್ತರು ಜೆಡಿಎಸ್‌ನೊಂದಿಗೆ ಸೌಹಾರ್ಧಿತ ಹೊಂದಾಣಿಕೆ ಹೊಂದಿದ್ದಾರೆ. ಮುಂದಿನ ದಿನಗಳಲ್ಲೂ ಈ ಮೈತ್ರಿ ಮುಂದುವರೆಯಬೇಕು ಎಂಬುವುದು ಕಾರ್ಯಕರ್ತರ ಅಭಿಲಾಷೆಯಾಗಿದೆ ಎಂದರು. ವಿಜಯೋತ್ಸವ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಬಾಳೆಮಂಡಿರಾಮದಾಸ್, ಜಿಲ್ಲಾ ಮುಖಂಡರ ಜೆ.ಪಿ.ಜಯಪಾಲಯ್ಯ, ಜೆಡಿಎಸ್ ಮುಖಂಡ ಎಂ.ರವೀಶ್‌ಕುಮಾರ್, ಬಿಜೆಪಿ ಮುಖಂಡ ಆರ್.ಅನಿಲ್‌ಕುಮಾರ್, ಡಿ.ಸೋಮಶೇಖರ್‌ಮಂಡಿಮಠ, ಸಿ.ಎಸ್.ಪ್ರಸಾದ್, ಡಿ.ಎಂ.ತಿಪ್ಪೇಸ್ವಾಮಿ, ಆದಿಭಾಸ್ಕರಶೆಟ್ಟಿ, ಮಾತೃಶ್ರೀಮಂಜುನಾಥ, ಶಶಿಧರ, ವೈ.ಕಾಂತರಾಜು, ಮಾರುತಿ, ನಗರಸಭಾ ಸದಸ್ಯರಾದ ವಿ.ವೈ.ಪ್ರಮೋದ್, ಪಾಲಮ್ಮ, ಇಂದುಮತಿ, ಶಾಂತಮ್ಮ, ಜಗದಾಂಭ, ಪಾಲನೇತ್ರನಾಯಕ, ಬಸವರಾಜು, ಮತ್ಸಮುದ್ರತಿಪ್ಪೇಸ್ವಾಮಿ ಮುಂತಾದವರು ಉಪಸ್ಥಿತರಿದ್ದರು.

# ಲೋಕಸಭಾ ಚುನಾವಣೆ, 26094 ಮತಗಳ ಅಂತರದಿಂದ ಗೆದ್ದ ಪ್ರಭಾ ಮಲ್ಲಿಕಾರ್ಜುನ್





» **ದಾವಣಗೆರೆ**

ಲೋಕಸಭಾ ಸಾರ್ವತ್ರಿಕ ಚುನಾವಣೆ ನಡೆದಿದ್ದು ದಾವಣಗೆರೆ ಲೋಕಸಭಾ ಕ್ಷೇತ್ರದಿಂದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದಡಾ;ಪ್ರಭಾಮಲ್ಲಿಕಾರ್ಜುನ್ ಅವರು 26094 ಮತಗಳ ಅಂತರದಿಂದ ಜಯಶಾಲಿಯಾಗಿದ್ದಾರೆ.

ಲೋಕಸಭಾ ಚುನಾವಣೆ ದೇಶದಲ್ಲಿ 7 ಹಂತಗಳಲ್ಲಿ ನಡೆದಿದ್ದು ರಾಜ್ಯದಲ್ಲಿ ಎರಡನೇ ಹಾಗೂ ಮೂರನೇ ಹಂತದಲ್ಲಿ ಚುನಾವಣೆ ನಡೆದಿದ್ದು ದಾವಣಗೆರೆ ಲೋಕಸಭಾ ಚುನಾವಣೆಗೆ ಮೇ 7 ರಂದು ಮತದಾನ ನಡೆದಿತ್ತು. ಜೂನ್ 4 ರಂದು ದಾವಣಗೆರೆ ವಿಶ್ವವಿದ್ಯಾನಿಯದಲ್ಲಿ ಮತ ಎಣಿಕೆ ನಡೆಯಿತು.

ಕಾಂಗ್ರೆಸ್ ಪಕ್ಷದ ಡಾ;ಪ್ರಭಾ ಮಲ್ಲಿಕಾರ್ಜುನ್ ಅವರು ಅಂಚೆ ಮತಗಳು ಸೇರಿದಂತೆ 633059 ಮತಗಳನ್ನು ಪಡೆದು ಇವರ ಸಮೀಪ ಸ್ಪರ್ಧಿ ಬಿ.ಜೆ.ಪಿ.ಯ ಗಾಯತ್ರಿ ಸಿದ್ದೇಶ್ವರ್ ಅವರು 606965 ಮತಗಳನ್ನು ಪಡೆದ್ದು 26094 ಮತಗಳ ಅಂತರದಿಂದ ಡಾ; ಪ್ರಭಾ ಮಲ್ಲಿಕಾರ್ಜುನ್ ಜಯಶಾಲಿಯಾಗಿದ್ದಾರೆ.

ಕ್ಷೇತ್ರದಲ್ಲಿ 8 ವಿಧಾನಸಭಾ ಕ್ಷೇತ್ರಗಳಿಂದ 1709244 ಒಟ್ಟು ಮತದಾರರಲ್ಲಿ 1315746 ಮತದಾರರು ಮೇ 7 ರಂದು ಮತದಾನ ಮಾಡಿದ್ದರು. ಮತ ಎಣಿಕೆಯನ್ನು ಪ್ರತಿ ಕ್ಷೇತ್ರದಲ್ಲಿ 14 ಟೇಬಲ್‌ಗಳಲ್ಲಿ ಎಣಿಕೆ ನಡೆಸಲಾಗಿರುತ್ತದೆ.

ಪಕ್ಷವಾರು, ಕಣದಲ್ಲಿದ್ದ ಅಭ್ಯರ್ಥಿಗಳು ಪಡೆದ ಮತಗಳ ವಿವರ; ಬಿ.ಜೆ.ಪಿ. ಗಾಯಿತ್ರಿ ಸಿದ್ದೇಶ್ವರ್ 606965, ಕಾಂಗ್ರೆಸ್ ಪಕ್ಷದ ಡಾ; ಪ್ರಭಾ ಮಲ್ಲಿಕಾರ್ಜುನ್ 633059, ಡಿ.ಹನುಮಂತಪ್ಪ, ಬಹುಜನ ಸಮಾಜ ಪಾರ್ಟಿ 4475, ಈಶ್ವರ ಶೇಂಗಾ, ಉತ್ತಮ ಪ್ರಜಾಕೀಯ ಪಾರ್ಟಿ 1430, ಅಣಬೇರು ತಿಪ್ಪೇಸ್ವಾಮಿ, ಸೋಷಿಯಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) 849, ಎಂ.ಪಿ.ಖಲಂದರ್, ಕಂಟ್ರಿ ಸಿಟಿಜನ್ ಪಾರ್ಟಿ 539, ದೊಡ್ಡೇಶಿ ಹೆಚ್.ಎಸ್, ಜನಹಿತ ಪಕ್ಷ 440, ರುದ್ರೇಶ್ ಕೆ.ಹೆಚ್, ಸಮಾಜ ವಿಕಾಸ ಕ್ರಾಂತಿ ಪಾರ್ಟಿ 348, ವಿರೇಶ್.ಎಸ್ (ಲಯನ್ ವಿರೇಶ್), ರಾಣಿ ಚೆನ್ನಮ್ಮ ಪಾರ್ಟಿ 459, ಕೆ.ಎಸ್.ವೀರಭದ್ರಪ್ಪ, ಕರ್ನಾಟಕ ರಾಷ್ಟ್ರ ಸಮಿತಿ 475, ಎಂ.ಜಿ.ಶ್ರೀಕಾಂತ್, ನವಭಾರತ ಸೇನಾ 560, ಎಂ.ಸಿ.ಶ್ರೀನಿವಾಸ್, ಭಾರತೀಯ ಪ್ರಜಾಗಳ ಕಲ್ಯಾಣ ಪಕ್ಷ 974, ಪಕ್ಷೇತರರಾದ ಅಬ್ದುಲ್ ನಜೀರ್ ಅಹಮೆದ್ 652, ಎ.ಕೆ.ಗಣೇಶ್ 1055, ಜಿ.ಎಂ.ಗಾಯಿತ್ರಿ ಸಿದ್ದೇಶಿ 2462, ಟಿ.ಚಂದ್ರು 3049, ಟಿ.ಜಬೀನಾ ಆಪಾ 5122, ತಸ್ಲೀಮ್ ಬಾನು 4140, ಪರವೀಜ್ ಹೆಚ್. 1868, ಪೆದ್ದಪ್ಪ.ಎಸ್ 513, ಬರಕತ್ ಅಲಿ 409, ಜಿ.ಎಂ.ಬರ್ಕತ್ ಅಲಿ ಬಾಷ 472, ಮಹಬೂಬ್ ಬಾಷ 306, ಮೊಹ್ಮದ್ ಹಯಾತ್.ಎಂ, 723, ಮಂಜು ಮಾರಿಕೊಪ್ಪ 379, ರವಿನಾಯ್ಕ.ಬಿ. 319, ರಷೀದ್ ಖಾನ್ 599, ಜಿ.ಬಿ.ವಿನಯ್ ಕುಮಾರ್ ಇವರು ಗಳಿಸಿದ ಮತಗಳು 42907, ಸಲೀಂ.ಎಸ್. 800, ಸೈಯದ್ ಜಬೀವುಲ್ಲಾ.ಕೆ 843, ನೋಟಾ 3173 ಮತಗಳು ಸೇರಿವೆ.

# ತಾಲ್ಲೂಕಿನಾದ್ಯಂತ ಮತ್ತೆ ಉತ್ತಮ ಹದ ಮಳೆ

### ತುಂಬಿ ಹರಿದ ಪಾವಗಡ ರಸ್ತೆಯ ಹಳ್ಳ : ಸಿಡಿಲು ಬಡಿದು ಒಂದು ಮೇಕೆ, ಎರಡು ಕುರಿ ಸಾವು





» **ಚಳ್ಳಕೆರೆ**

ತಾಲ್ಲೂಕಿನಾದ್ಯಂತ ಮಂಗಳವಾರ ಸಂಜೆ ಹದಮಳೆಯಾಗಿದ್ದು, ನಗರದ ಪಾವಗಡ ರಸ್ತೆಯ ಹಳ್ಳ ತುಂಬಿ ಹರಿಯುತ್ತಿದ್ದು ನಿರೀಕ್ಷೆಗೂ ಮೀರಿ ನೀರಿನ ರಭಸ ಹೆಚ್ಚಿದ ಪರಿಣಾಮ ಸಾರ್ವಜನಿಕರು, ವಾಹನ ಸವಾರರು ರಸ್ತೆಯಲ್ಲಿ ಕೆಲಗಂಟೆಗಳ ಕಾಲ ಓಡಾಟ ನಡೆಸಲು ಪಜೀತಿಗೆ ಒಳಗಾದರು.

ಪಾವಗಡ ರಸ್ತೆಯ ಹಳ್ಳದ ಜೊತೆಯಲ್ಲಿಯೇ ಕಾಟಪ್ಪನಹಟ್ಟಿಗೆ ಸಂಪರ್ಕ ನೀಡುವ ರಸ್ತೆಯೂ ಸಹ ಹಳ್ಳದ ನೀರಿನಿಂದ ತುಂಬಿದ್ದು ವಾಹನ ಸಂಚಾರ ಹಾಗೂ ಓಡಾಟಕ್ಕೂ ಸಹ ಕೆಲಹೊತ್ತು ಬ್ರೇಕ್ ಬಿದಿತ್ತು. ಬಹಳ ವರ್ಷಗಳ ನಂತರ ಈ ಹಳ್ಳ ತುಂಬಿ ಹರಿಯುತ್ತಿದೆ. ಮಳೆಯ ನೀರಿನ ರಭಸವನ್ನು ಕಣ್ತುಂಬಿಕೊಂಡರು.

ಸಂಜೆ ಬಿದ್ದ ಗುಡುಗು ಸಹಿತ ಮಳೆಯಿಂದ ತಾಲ್ಲೂಕಿನ ನನ್ನಿವಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರಾಯಬಾರನಹಟ್ಟಿ ಗ್ರಾಮದ ಬೊಮ್ಮಯ್ಯ ಎಂಬುವವರ ಒಂದು ಮೇಕೆ, ಎರಡು ಕುರಿಗಳಿಗೆ ಸಿಡಿಲು ಹೊಡೆದು ಸ್ಥಳದಲ್ಲೇ ಮೃತಪಟ್ಟಿರುತ್ತವೆ. ಈಗಾಗಲೇ ತಾಲ್ಲೂಕಿನಾದ್ಯಂತ ನಿರೀಕ್ಷೆಗೂ ಮೀರಿ ಉತ್ತಮ ಮಳೆಯಾಗಿದ್ದರೂ ಸಹ ಮುಂದಿನ ದಿನಗಳಲ್ಲಿ ಭಾರಿಪ್ರಮಾಣದ ಮಳೆಯ ನಿರೀಕ್ಷೆಯಲ್ಲಿ ರೈತರು ಇದ್ದಾರೆ.

## ಇಸ್ಕಾನ್ ಸಂಸ್ಥೆಯಿಂದ ಧಾರ್ಮಿಕ ಕಾರ್ಯಕ್ರಮಗಳ ಮೂಲಕ ಜಾಗೃತಿ



**ಚಳ್ಳಕೆರೆ:** ನಗರದ ಚಿತ್ರದುರ್ಗ ರಸ್ತೆಯಲ್ಲಿರುವ ನರಸಿಂಹಗಿರಿಧಾರಿ ಮಂದಿರದಲ್ಲಿ ನರಸಿಂಹ ಜಯಂತಿ ಪ್ರಯುಕ್ತ ಬೆಂಗಳೂರಿನ ಇಸ್ಕಾನ್ ಸಂಸ್ಥೆಯ ನಿತಾಯಿದಾಸ್, ಗೌರಂಗದಾಸ್, ಮಂಜುನಾಥ, ಮುರಾರಿಯಾದವ್, ರಾಜ್‌ದೀಪ್, ನವೀನ್ ಇವರ ನೇತೃತ್ವದಲ್ಲಿ ಪೂಜಾ, ಹವನ, ಹೋಮ ಕಾರ್ಯಕ್ರಮ ನಡೆಸಲಾಯಿತು. ನಗರದ ಇಸ್ಕಾನ್ ಸಂಸ್ಥೆಯ ಮುಖ್ಯಸ್ಥ ಮಲ್ಲಿಕಾರ್ಜುನ್ ಮಾತನಾಡಿ, ಇಸ್ಕಾನ್ ಸಂಸ್ಥೆ ಕಳೆದ ಹಲವಾರು ದಶಕಗಳಿಂದ ಧಾರ್ಮಿಕ ವಿಚಾರಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯವನ್ನು ನಿರಂತರವಾಗಿ ನಡೆಸುತ್ತಾ ಬಂದಿದೆ. ಭಕ್ತರ ಸಹಕಾರದಿಂದ ಎಲ್ಲಾ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯುತ್ತಿವೆ ಎಂದರು. ಈ ಸಂದರ್ಭದಲ್ಲಿ ಶ್ರೀನಿವಾಸಲು, ವೀರೇಶ್, ಭೀಮಕ್ಕ, ಪರಿಮಳ, ಅಶೋಕ್‌ಭಾನು, ಉಮಾದೇವಿ, ಆರ್ಚನರಮೇಶ್‌ಬಾಬು, ಸ್ವಾಮಿ, ನೇತಾಜಿ ಪ್ರಸನ್ನ ಮುಂತಾದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಬೀದಿ ನಾಯಿಗಳ ನಿಯಂತ್ರಣಕ್ಕೆ ಮುಂದಾದ ಪುರಸಭೆ

» **ಹೊಸದುರ್ಗ**

ಪಟ್ಟಣದ ಪುರಸಭಾ ವ್ಯಾಪ್ತಿಯಲ್ಲಿ 23 ವಾರ್ಡ್‌ಗಳಲ್ಲಿ ಬೀದಿನಾಯಿಗಳು ಸಾರ್ವಜನಿಕರಿಗೆ ತೊಂದರೆ ಉಂಟು ಮಾಡುತ್ತಿದ್ದ ಹಿನ್ನೆಲೆಯಲ್ಲಿ ಪುರಸಭಾ ಮುಖ್ಯಾಧಿಕಾರಿ ನೇತೃತ್ವದಲ್ಲಿ ಬೀದಿ ನಾಯಿಗಳಿಗೆ ರ್‍ಯಾಬಿಸ್ ನಿಯಂತ್ರಣ ಲಸಿಕೆಯನ್ನು ಹಾಕಲಾಯಿತು.ಪಟ್ಟಣದ ಗಾಂಧಿನಗರದಲ್ಲಿರುವ ಮಟನ್ ಮತ್ತು ಚಿಕನ್ ಮಾರ್ಕೇಟ್‌ನಲ್ಲಿ ಕಂಡುಬರುವ ಬೀದಿನಾಯಿಗಳನ್ನು ಪಶು ಇಲಾಖೆ ಹಾಗೂ ಪುರಸಭೆಯ ಜಂಟಿ ಸಂಯೋಜನೆಯಡಿ ಪಟ್ಟಣದ ಎಲ್ಲಾ ಬೀದಿ ನಾಯಿಗಳನ್ನು ಮೈಸೂರು ಮೂಲದ ನುರಿತ ಡಾಗ್ ಕ್ಯಾಚರ್ ನಾಗರಾಜ್ ರವರ ಮೂಲಕ ಸುರಕ್ಷಿತವಾಗಿ ಹಿಡಿದು ರ್‍ಯಾಬಿಸ್ ನಿಯಂತ್ರಣ ಲಸಿಕೆಯನ್ನು ಹಾಕಲಾಯಿತು.ಮುಖ್ಯಾಧಿಕಾರಿ ತಿಮ್ಮರಾಜು ಜಿ.ವಿ.ಮಾತನಾಡಿ ಸಾಕು ನಾಯಿಗಳನ್ನು ಬೀದಿಗೆ ಬಿಡದಂತೆ ತಿಳಿಸಿ ಎಲ್ಲಾ ನಾಯಿಗಳಿಗೆ ಲಸಿಕೆ ಹಾಕಿಸಲು ಸಾರ್ವಜನಿಕರಿಗೆ ಕರೆ ನೀಡಲಾಗಿತ್ತು

ಸಾರ್ವಜನಿಕರು ಬೀದಿ ನಾಯಿಗಳಿಗೆ ಎಲ್ಲೆಂದರಲ್ಲಿ ಆಹಾರ ಹಾಕುತ್ತಿರುವುದರಿಂದ ಬೀದಿ ನಾಯಿಗಳ ಸಂತತಿ ಹೆಚ್ಚಾಗುತ್ತಿದ್ದು, ಇದರಿಂದ ಶಾಲಾ ಮಕ್ಕಳಿಗೆ, ಸಾರ್ವಜನಿಕರಿಗೆ, ವಾಹನ ಸವಾರರಿಗೆ ತುಂಬಾ ತೊಂದರೆಯಾಗುತ್ತಿದೆ ಎಂಬ ಸಾಕಷ್ಟು ದೂರುಗಳು ಬಂದಿದ್ದವು ಅಲ್ಲದೆ ಸಂಯುಕ್ತಕರ್ನಾಟಕ ಪತ್ರಿಕೆಯಲ್ಲೂ ಸಹಾ ಎಚ್ಚರಿಕೆಯ ವರದಿ ಪ್ರಕಟವಾಗಿತ್ತು ಎಂದು ಮಾಹಿತಿ ನೀಡಿದರು.




**ಪ್ರಮುಖ ಸುದ್ದಿ**

### ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಕಟ್ಟಡ ಪರವಾನಿಗೆ ಪಡೆದು ಕಟ್ಟಡ ನಿರ್ಮಿಸಬೇಕು

# ಒತ್ತುವರಿ ಮಾಡಿ ಕಟ್ಟಡ ನಿರ್ಮಾಣ ತೆರೆವುಗೊಳಿಸಿದ ಪುರಸಭೆ

» **ಹೊಸದುರ್ಗ**

ಸಾರ್ವಜನಿಕ ಸ್ಥಳವನ್ನು ಒತ್ತುವರಿ ಮಾಡಿ ಕಟ್ಟಡ ನಿರ್ಮಾಣ ಮಾಡುತಿದ್ದ ಸ್ಥಳಕ್ಕೆ ಬೇಟಿ ನೀಡಿ ಪರಿಶೀಲಿಸಿದ ಪುರಸಭೆ ಮುಖ್ಯಾಧಿಕಾರಿ ತಿಮ್ಮರಾಜು ಜಿ.ವಿ ಕಂದಾಯ ಶಾಖೆಯ ತಂಡದೊಂದಿಗೆ ಅಳತೆ ಮಾಡಿ ಸಾರ್ವಜನಿಕ ರಸ್ತೆ ಮತ್ತು ಬೋರ್‌ವೆಲ್ ಒತ್ತುವರಿಯನ್ನು ತೆರವುಗೊಳಿಸಿದರು.

ಪುರಸಭಾ ಪಟ್ಟಣದ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣ ಮಾಡಲು ಕಡ್ಡಾಯವಾಗಿ ಪುರಸಭಾ ಕಾಯ್ದೆ 1964 ರ ಅಡಿಯಲ್ಲಿ ಪರವಾನಿಗೆ ಪಡೆದು ಸೆಟ್ ಬ್ಯಾಕ್ ಜಾಗವನ್ನು ಬಿಟ್ಟು ನಿಯಮಾನುಸಾರ ಪರವಾನಿಗೆ ಶುಲ್ಕ ಪಾವತಿಸಿ ಕಟ್ಟಡ ನಿರ್ಮಿಸುವ ವಿಚಾರದಲ್ಲಿ ಕೋಟೆ ವೃದ್ದಾಶ್ರಮದ ಬಳಿ ಸಾರ್ವಜನಿಕ ಸ್ಥಳವನ್ನು ಒತ್ತುವರಿ ಮಾಡಿ ಕಟ್ಟಡ ನಿರ್ಮಾಣವನ್ನು ತೆರವುಗೊಳಿಸಿದರು.

ಸೆಟ್ ಬ್ಯಾಕ್ ಬಿಟ್ಟು ಕಟ್ಟಡ ನಿರ್ಮಿಸಲು ಸೂಚಿಸಲಾಯಿತು ಹಾಗೂ ಪಟ್ಟಣ ವ್ಯಾಪ್ತಿಯಲ್ಲಿ ಎಲ್ಲಾ ನಿವೇಶನ ಮಾಲೀಕರು ಕಡ್ಡಾಯವಾಗಿ ಪುರಸಭೆಯಿಂದ ಅನುಮತಿ ಪಡೆದ ಕನ್ಸಲ್ಟೆಂಟ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಕಟ್ಟಡ ಪರವಾನಿಗೆಪಡೆದುಕಟ್ಟಡನಿರ್ಮಿಸುವುದು. ತಪ್ಪಿದ್ದಲ್ಲಿ ನಿಯಮ ಉಲ್ಲಂಘಿಸಿ ಕಟ್ಟಡ ಕಟ್ಟುತ್ತಿರುವವರ ವಿರುದ್ಧ ನಿರ್ಧಾಕ್ಷಣ್ಯವಾಗಿ ಕಾನುನು ಅಡಿ ಕ್ರಮಕೈಗೊಳ್ಳಲಾಗುವುದು ಹಾಗೂ ಅನಧಿಕೃತ ಕಟ್ಟಡವೆಂದು ಪರಿಗಣಿಸಿ ದುಪ್ಪಟ್ಟು ತೆರಿಗೆ ವಿಧಿಸುವುದರ ಜೊತೆಗೆ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗುವುದು ಎಂದು ತಿಳಿಸಿದರು. ಕಿರಿಯ ಅಭಿಯಂತರರಾದ ವೆಂಕಟೇಶುಲು ಮಾತನಾಡಿ ಪಟ್ಟಣದಲ್ಲಿ ಸುಮಾರು 12000 ಹೆಚ್ಚು ನಿವೇಶನ ಹಾಗೂ ಕಟ್ಟಡದ ಖಾತೆಗಳಿದ್ದು ನಿವೇಶನ ಮಾಲೀಕರು ನಿಗಧಿತ ಅವಧಿಯೊಳಗೆ ತೆರಿಗೆಯನ್ನು ಪ್ರತಿ ವರ್ಷ ಪಾವತಿಸುವ ಮೂಲಕ ಸರ್ವೋತೋಮುಖ ಅಭಿವೃದ್ಧಿಗೆ ಕೈಜೋಡಿಸುವುದು ಕಟ್ಟಡ ಪರವಾನಿಗೆ ಪಡೆಯಲು ಕನ್ಸಲ್ಟೆಂಟ್‌ಗಳನ್ನು ನೇಮಕ ಮಾಡಿದ್ದು ಆನ್‌ಲೈನ್ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಿ ನಗರ ಮತ್ತು ಗ್ರಾಮಾಂತರ ಯೋಜನಾ ಪ್ರಾಧಿಕಾರದ ತಾಂತ್ರಿಕ ಅಭಿಪ್ರಾಯ ಪಡೆದು ಕಟ್ಟಡ ಪರವಾನಿಗೆಯನ್ನು 30 ದಿನಗಳೊಳಗಾಗಿ ಸಕಾಲ ಸೇವೆಯಲ್ಲಿ ನೀಡಲಾಗುವುದು. ನಿವೇಶನ ಮಾಲೀಕರು ಹೆಚ್ಚಿನ ಮಾಹಿತಿ ಪಡೆದು ಪುರಸಭೆಯ ತಾಂತ್ರಿಕ ಶಾಖೆಗೆ ಖುದ್ದು ಭೇಟಿ ನೀಡಿ ಮಾಹಿತಿ ಪಡೆದು ಪರವಾನಿಗೆ ಪಡೆದು ಕಟ್ಟಡ ನಿರ್ಮಾಣ ಮಾಡಬೇಕು ಎಂದರುಈ ಸಂಧರ್ಭದಲ್ಲಿ ಕಂದಾಯ ನಿರೀಕ್ಷಕರಾದ ಯೋಗೇಶ್ ರವರು, ಸಿಬ್ಬಂದಿಗಳು ಹಾಗೂ ಇನ್ನಿತರರು ಹಾಜರಿದ್ದರು.



**ಫಾಸ್ಟ್ ನ್ಯೂಸ್**

## ಸಸಿನೆಡುವ ಕಾರ್ಯಕ್ರಮದ ಚಾಲನೆ

» **ದಾವಣಗೆರೆ**

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಾನಗರಪಾಲಿಕೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಇವರುಗಳ ಸಹಯೋಗದಲ್ಲಿ ಜೂನ್ 5 ರಂದು ಸಂಜೆ 4 ಗಂಟೆಗೆ ನಗರದ ಶಿವನಗರ ಬಳಿ ಇರುವ ಎಸ್‌ಟಿಪಿ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಶಿವನಗರ ತ್ಯಾಜ್ಯ ನೀರು ಸಂಸ್ಕರಣಾ ಘಟಕದ ಬಳಿ 6 ಎಕರೆ ಜಾಗದಲ್ಲಿ 5000 ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುತ್ತದೆ. ಹಿರಿಯ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ.ಮ.ಕರೆಣ್ಣವರ ಕಾರ್ಯಕ್ರಮವನ್ನು ಉದ್ಘಾಟಿಸುವರು. ಮಹಾನಗರಪಾಲಿಕೆಯ ಆಯುಕ್ತರಾದ ರೇಣುಕಾ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಅಧಿಕಾರಿ ಡಾ.ಹೆಚ್.ಲಕ್ಷ್ಮೀಕಾಂತ್ ಭಾಗವಹಿಸುವರು.

## ಬಿ.ಎಸ್.ಎನ್.ಎಲ್ ಸೇವೆಗಳ ಮಾರಾಟಕ್ಕೆ ಪಾಲುದಾರರಿಗೆ ಅವಕಾಶ

» **ದಾವಣಗೆರೆ**

ಬಿಎಸ್‌ಎನ್‌ಎಲ್ ದೂರಸಂಪರ್ಕ ಚಿತ್ರದುರ್ಗ, ಇವರು ಬಿಎಸ್‌ಎನ್‌ಎಲ್ ಉತ್ಪನ್ನಗಳು ಮತ್ತು ಸೇವೆಗಳ ಮಾರಾಟಕ್ಕಾಗಿ ಚಾನೆಲ್ ಪಾಲುದಾರರನ್ನು ತೊಡಗಿಸಿಕೊಳ್ಳುವ ಮೂಲಕ ವ್ಯಾಪಾರೋದ್ಯಮಗಳಿಗೆ ಅವಕಾಶ ಮಾಡಿಕೊಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಶ್ರೇಯಸ್.ಬಿ ಮೊ.ಸಂ:9480291999, ಪರಶುರಾಮ.ಬಿ ಮೊ.ಸಂ:9481669990 ನ್ನು ಸಂಪರ್ಕಿಸಲು ಬಿಎಸ್‌ಎನ್‌ಎಲ್‌ನ ಡಿಜಿಎಂ ತಿಳಿಸಿದ್ದಾರೆ.

## ಜೂನ್ 6 ಮತ್ತು 7ರಂದು ಗುರುವಂದನಾ ಕಾರ್ಯಕ್ರಮ

» **ಚಿತ್ರದುರ್ಗ**

ಶ್ರೀ ನಿರಂಜನಸ್ವಾಮಿ ಗದ್ದಿಗೆ ಟ್ರಸ್ಟ್ ವತಿಯಿಂದ ಚಿತ್ರದುರ್ಗ ತಾಲ್ಲೂಕಿನ ಬಚ್ಚಬೋರನಹಟ್ಟಿ ಗ್ರಾಮದ ಶಿವಪುರ ಸುಕ್ಷೇತ್ರ ಬಸವಣ್ಣ ದೇವಸ್ಥಾನದ ಆವರಣದಲ್ಲಿರುವ ನಿರಂಜನಸ್ವಾಮಿ ಗದ್ದಿಗೆ ಅವದೂತ ಪೀಠದಲ್ಲಿ ಇದೇ ಜೂನ್ 6 ಮತ್ತು 7ರಂದು ಶ್ರೀ ಅಲಕ್ ನಿರಂಜನ ಸ್ವಾಮಿಯವರ 16ನೇ ವರ್ಷದ ಗುರುವಂದನಾ ಕಾರ್ಯಕ್ರಮ ಹಾಗೂ ಶ್ರೀ ಸತ್ಯಪ್ಪ ಸ್ವಾಮಿಯವರ 9ನೇ ವರ್ಷದ ಹಾಗೂ ಶ್ರೀ ಈಗಲು ಸ್ವಾಮಿಯವರ 7ನೇ ವರ್ಷದ ಗುರುವಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಗಾದ್ರಿಲಿಂಗೇಶ್ವರ ಸ್ವಾಮಿ ಪಟ್ಟಾಧ್ಯಕ್ಷರಾದ ಪೂಜಾರಿ ಮುತ್ತಯ್ಯ, ವದ್ದಿಕೆರೆ ಕಾಂತರಾಜ್ ಸ್ವಾಮಿ, ಬಿ.ಬಿ.ಹಟ್ಟಿ ಗುರುಮಲ್ಲೇಶ್ವರ ಮಠದದ ಜೋಗಣ್ಣಗಳ ಓಬಯ್ಯ, ಅಖಂಡ ಬಸವೇಶ್ವರ ಸ್ವಾಮಿ ಇವರು ಕಾರ್ಯಕ್ರಮದ ಸಾನಿಧ್ಯವಹಿಸುವರು. ಶ್ರೀ ನಿರಂಜನಸ್ವಾಮಿ ಅವರ ಶಿಷ್ಯರಾದ ಚಳ್ಳಕೆರೆ ತಾಲ್ಲೂಕು ಚೌಳೂರು ಗ್ರಾಮದ ಈರಣ್ಣ ಸ್ವಾಮಿ ಅವರು ಪೂಜಾ ಕಾರ್ಯ ನೆರವೇರಿಸುವರು. ಜೂನ್ 6ರಂದು ಗುರುವಾರ ಸಂಜೆ 5 ಗಂಟೆಗೆ ಗಂಗಾಪೂಜೆ, ರಾತ್ರಿ ಅಖಂಡ ಭಜನಾ ಕಾರ್ಯಕ್ರಮ ನಡೆಯಲಿದೆ. ಜೂನ್ 7ರಂದು ಶುಕ್ರವಾರ ಬೆಳಿಗ್ಗೆ ಶ್ರೀ ಸ್ವಾಮಿಯ ಭಕ್ತಾಧಿಗಳಿಂದ ಮೆರವಣಿಗೆ ಮೂಲಕ ಶ್ರೀ ಗಾದ್ರಿಲಿಂಗೇಶ್ವರಸ್ವಾಮಿಗೆ ಪೂಜೆ ಸಲ್ಲಿಸಿ ಗದ್ದಿಗೆಗೆ ಆಗಮನ, ಸದ್ಭಕ್ತರ ಸಾನಿಧ್ಯದಲ್ಲಿ ಶ್ರೀಗಳ ಗದ್ದಿಗೆ ಪೂಜೆ ನಡೆಯಲಿದೆ. ಚುನಾವಣಾ ನೀತಿಸಂಹಿತೆ ಜಾರಿಯಲ್ಲಿರುವುದರಿಂದ ಈ ವರ್ಷದ ಗುರುವಂದನಾ ಕಾರ್ಯಕ್ರಮ ಸಾಂಕೇತಿಕವಾಗಿ, ಸರಳವಾಗಿ ಪೂಜಾ ಕಾರ್ಯಕ್ರಮ ನಡೆಸಲಾಗುತ್ತದೆ ಎಂದು ಶ್ರೀನಿರಂಜನ ಸ್ವಾಮಿ ಗದ್ದಿಗೆ ಟ್ರಸ್ಟ್ ಅಧ್ಯಕ್ಷ ಜಿ.ಬಿ.ಪಾಲಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮತ ಎಣಿಕೆಗೂ ಮುನ್ನ ದೇವಸ್ಥಾನಕ್ಕೆ ಕಾರಜೋಳ



» **ಚಿತ್ರದುರ್ಗ**

ಚಿತ್ರದುರ್ಗ ಲೋಕಸಭಾ ಚುನಾವಣೆಯ ಹಿನ್ನಲೆಯಲ್ಲಿ ಮತಗಳ ಎಣಿಕೆ ಕಾರ್ಯ ಇಂದು ನಡೆಯುತ್ತಿದ್ದು ಈ ಚುನಾವಣೆಯಲ್ಲಿ ಭಾರತೀಯ ಜನತಾ ಪಾರ್ಟಿಯ ಅಭ್ಯರ್ಥಿಗಳು, ಮಾಜಿ ಉಪ ಮುಖ್ಯಮಂತ್ರಿಗಳಾದ ಗೋವಿಂದ ಕಾರಜೋಳ ರವರ ಗೆಲುವಿಗಾಗಿ ನಗರದ ಜೆಸಿಆರ್ ಬಡಾವಣೆಯಲ್ಲಿನ ವಿನಾಯಕ ದೇವಾಲಯದಲ್ಲಿ ಇಂದು ಬೆಳಿಗ್ಗೆ ಪೂಜೆಯನ್ನು ಸಲ್ಲಿಸಲಾಯಿತು,

ಈ ಸಂದರ್ಭದಲ್ಲಿ ಅಭ್ಯರ್ಥಿ ಗೋವಿಂದ ಕಾರಜೋಳ, ಬಿಜೆಪಿ ಜಿಲ್ಲಾಧ್ಯಕ್ಷ ಎ.ಮುರಳಿ, ವಕ್ತಾರರಾದ ನಾಗರಾಜ್ ಬೇದ್ರೇ, ದಗ್ಗೆ ಶಿವಪ್ರಕಾಶ್, ಮಾಧುರಿ ಗೀರಿಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂಪತ್ ಕುಮಾರ್, ನಗರಾಧ್ಯಕ್ಷ ನವೀನ್ ಚಾಲುಕ್ಯ, ಸೇರಿದಂತೆ ಪಕ್ಷದ ಮುಖಂಡರು ಕಾರ್ಯಕರ್ತರು ಹಾಜರಿದ್ದರು.

# ಸರ್ಕಾರ ಮತ್ತು ಸಮಾಜದ ಜವಾಬ್ದಾರಿ......



ಇಂಟೆಲಿಜೆನ್ಸ್ ( department of intelligence ) ಎಂಬ ಆಂತರಿಕ ಬೇಹುಗಾರಿಕೆ ಮತ್ತು ಭದ್ರತಾ ಇಲಾಖೆಯೊಂದು ಕರ್ನಾಟಕದಲ್ಲಿ ಅಸ್ತಿತ್ವದಲ್ಲಿದೆ. ಇಡೀ ರಾಜ್ಯದ ಆಗುಹೋಗುಗಳ ಬಗ್ಗೆ ಸೂಕ್ಷ್ಮವಾಗಿ ಗಮನಿಸಿ ಒಂದು ಮುನ್ನೋಟದ ವರದಿಯನ್ನು ಸರ್ಕಾರದ ಜೊತೆ ಪ್ರತಿನಿತ್ಯ ಹಂಚಿಕೊಳ್ಳುತ್ತದೆ...

ನಮಗೆ ಅನೇಕ ವಿಷಯಗಳು ಘಟನೆಗಳಾದ ನಂತರ ತಿಳಿಯುತ್ತದೆ. ಆಗಬಹುದಾಗಿದ್ದ ಅನೇಕ ಘಟನೆಗಳನ್ನು ಈ ಇಲಾಖೆ ತಡೆದಿರುತ್ತದೆ. ಅದು ಸಾರ್ವಜನಿಕವಾಗಿ ಅಷ್ಟು ಪ್ರಚಾರವಾಗುವುದಿಲ್ಲ....

ಕೌಟಿಲ್ಯ ತನ್ನ " ಅರ್ಥಶಾಸ್ತ್ರ " ಎಂಬ ರಾಜನೀತಿ ಗ್ರಂಥದಲ್ಲಿ ಈ ಇಲಾಖೆಯ ಮಹತ್ವವನ್ನು ಸ್ಪಷ್ಟವಾಗಿ ಉಲ್ಲೇಖ ಮಾಡಿದ್ದಾನೆ. ಅಲ್ಲದೆ ಅದು ಹೇಗೆ ಕೆಲಸ ಮಾಡಬೇಕು ಎಂಬುದನ್ನು ವಿವರಿಸಿದ್ದಾನೆ.....

ಆದರೂ ಈ ಇಲಾಖೆಯ ಗಮನಕ್ಕೆ ಬಾರದೆ ಅನೇಕ ದುರ್ಘಟನೆಗಳು ನಡೆಯುತ್ತಲೇ ಇರುತ್ತದೆ. ರಾಜಕೀಯ ಬಂಡಾಯಗಳು ಸಹ ಈ ಇಲಾಖೆಯ ಕಣ್ಣು ತಪ್ಪಿಸಿ ಸಂಭವಿಸಿದೆ. ಆಗೆಲ್ಲಾ ಈ ಇಲಾಖೆಯ ವಿಫಲತೆಯ ಬಗ್ಗೆ ಟೀಕೆಗಳು ಬರುತ್ತವೆ.....

ಈ ಇಲಾಖೆಯ ಬಗ್ಗೆ ಈಗ ಪ್ರಸ್ತಾಪ ಮಾಡಲು ಕಾರಣ ಒಂದು ಬಹುದೊಡ್ಡ ಲೈಂಗಿಕ ಹಗರಣ ಕರ್ನಾಟಕದಲ್ಲಿ ನಡೆದಿದೆ. ಅದರಲ್ಲಿ ಒಂದು ಜಿಲ್ಲೆಯ ಪ್ರಭಾವಿ ಲೋಕಸಭಾ ಸದಸ್ಯರು ಪ್ರಮುಖ ಆರೋಪಿಯಾಗಿದ್ದಾರೆ ಎಂದು ಹೇಳಲಾಗಿದೆ. ಈ ಘಟನೆ ಕೇವಲ ಒಂದು ದಿನದಲ್ಲಿ ನಡೆದಿರುವುದಿಲ್ಲ. ಬಹುಶಃ ಅವರ ಲೋಕಸಭಾ ಸದಸ್ಯ ಅವಧಿಯ ಐದು ವರ್ಷಗಳ ಸಂಪೂರ್ಣ ಕಾಲಾವಧಿಯಲ್ಲಿ, ವಿವಿಧ ಹಂತಗಳಲ್ಲಿ ನಡೆದಿರಬೇಕು ಎನಿಸುತ್ತದೆ. ಅಲ್ಲದೇ ಅದರಲ್ಲಿ ಮಾಜಿ ಮಂತ್ರಿಯಾದ ಅವರ ತಂದೆಯವರ ಪಾತ್ರವೂ ಇರುವ ಬಗ್ಗೆ ಎ□□□ಆರ್ ಆಗಿದೆ. ಜೊತೆಗೆ ಈ ಬಗ್ಗೆ ಸಾರ್ವಜನಿಕರಲ್ಲಿ ಗುಸು–ಗುಸು ಕಳೆದ ಸುಮಾರು ಆರು ತಿಂಗಳಿನಿಂದ ಮಾತುಕತೆಗಳು ನಡೆಯುತ್ತಿರುತ್ತದೆ. ಅದಕ್ಕೆ ಪುಷ್ಠಿ ನೀಡುವಂತೆ ಕೆಲವು ಪೆನ್ ಡ್ರೈವ್ಗಳು ಸಿಕ್ಕಿರುತ್ತದೆ. ಅಧಿಕೃತವಾಗಿ ಅದೇ ವ್ಯಕ್ತಿ ಕೋರ್ಟಿನಿಂದ ಆ ಬಗ್ಗೆ ಮಾಹಿತಿ ಹಂಚಿಕೊಳ್ಳದಂತೆ ತಡೆಯಾಜ್ಞೆ ಸಹ ತಂದಿರುತ್ತಾರೆ........



ಇಷ್ಟೆಲ್ಲಾ ಆದ ನಂತರ ಆಡಳಿತ ವ್ಯವಸ್ಥೆ ಮತ್ತು ಇಂಟೆಲಿಜೆನ್ಸ್ ಇಲಾಖೆ ಈ ಬಗ್ಗೆ ಒಂದು ಎಚ್ಚರಿಕೆಯನ್ನು ವಹಿಸಬೇಕಾಗಿತ್ತು. ಮಾಧ್ಯಮಗಳು ಸಹ ಕನಿಷ್ಠ ಎಲ್ಲಾ ಕಾನೂನಾತ್ಮಕ ತಡೆಯಾಜ್ಞೆಯ ಮಿತಿಗಳ ನಡುವೆಯೂ ಪರೋಕ್ಷ ಜನ ಅಭಿಪ್ರಾಯ ರೂಪಿಸಿ ಸರ್ಕಾರದ ಮೇಲೆ ಒತ್ತಡ ತರಬೇಕಾಗಿತ್ತು. ಅದು ಸಾಧ್ಯವಾಗಲಿಲ್ಲ. ಚುನಾವಣಾ ಸಂದರ್ಭದಲ್ಲಿ ಕೇವಲ ಮತದಾನಕ್ಕೆ ಒಂದು ವಾರ ಇರುವಾಗ ಆ ವಿಡಿಯೋ ಎಲ್ಲಾ ಕಡೆ ಪ್ರಸಾರವಾಯಿತು. ಆ ಸಂಸದನ ವಿಕೃತ ಕಾಮ ಎಲ್ಲ ಕಡೆಯೂ ಬಯಲಾಯಿತು. ಇಷ್ಟಾದ ನಂತರ ಇಂಟೆಲಿಜೆನ್ಸ್ ಇಲಾಖೆ ಆ ವ್ಯಕ್ತಿಯನ್ನು ಸಂಪೂರ್ಣ ತನ್ನ ಕಣ್ಗಾವಲಿನಲ್ಲಿ ಇರಿಸಬೇಕಾಗಿತ್ತು......

ಆದರೆ ಯಾವುದೋ ಪ್ರಬಲ ಶಕ್ತಿಗಳು ಇದರಲ್ಲಿ ಭಾಗಿಯಾಗಿ ಸರ್ಕಾರ ಎ□□□ಟಿ ತನಿಖೆ ನಡೆಸುವುದಕ್ಕೂ ಆ ವ್ಯಕ್ತಿ ಕಣ್ಮರೆಯಾಗುವುದಕ್ಕೂ ಕೆಲವೇ ಗಂಟೆಗಳ ಅಂತರವನ್ನು ಗಮನಿಸಿದರೆ ಶಾಸಕಾಂಗ ಮತ್ತು ಕಾರ್ಯಾಂಗದ ನಡುವಿನ ದುಷ್ಟ ಹೊಂದಾಣಿಕೆ ಹೊರಬರುತ್ತದೆ. ಇಂತಹ ಗಂಭೀರ ವಿಷಯಗಳನ್ನು ಇಂಟೆಲಿಜೆನ್ಸ್ ಗಮನಿಸದಿದ್ದರೆ ಆ ಇಲಾಖೆಯ ಅವಶ್ಯಕತೆಯಾದರೂ ಏನು, ಕಾನೂನಿನ ಪ್ರಕಾರ ಏನೇ ಅಡೆತಡೆ ಇರಬಹುದು, ಆದರೆ ಆ ವ್ಯಕ್ತಿ ಕಣ್ಮರೆಯಾಗುವುದಕ್ಕೆ ಅವಕಾಶ ನೀಡಬಾರದಿತ್ತು....

ಅದೂ ಆತ ವಿದೇಶಕ್ಕೆ ಓಡಿಹೋಗಿದ್ದಾನೆ ಎಂದರೆ ಖಂಡಿತ ಇಲಾಖೆ ವಿಫಲವಾಗಿದೆ ಎಂದೇ ಹೇಳಬೇಕಾಗುತ್ತದೆ. ಈಗ ಆತ ಅಲ್ಲಿ ಕುಳಿತು ತನ್ನ ಇಲ್ಲಿನ ಸಂಪರ್ಕಗಳನ್ನು ಉಪಯೋಗಿಸಿಕೊಂಡು ನಿರೀಕ್ಷಣಾ ಜಾಮೀನಿಗಾಗಿ ಅರ್ಜಿ ಸಲ್ಲಿಸುವುದಲ್ಲದೆ ಸಾಕ್ಷಗಳನ್ನು ಬೆದರಿಸುವ, ಆಮಿಷ ಒಡ್ಡುವ, ನಾಶಪಡಿಸುವ ಎಲ್ಲ ಸಾಧ್ಯತೆಗಳು ಇರುತ್ತದೆ. ಅಲ್ಲದೆ ಸರ್ಕಾರ ಸಹ ಆತನನ್ನು ಬಂಧಿಸಲು ಸಾಕಷ್ಟು ಹಣ ಖರ್ಚು ಮಾಡಬೇಕಾಗುತ್ತದೆ......

ಒಂದು ವೇಳೆ ನಿರೀಕ್ಷಣಾ ಜಾಮೀನು ದೊರೆತ ನಂತರ ಆ ವ್ಯಕ್ತಿಯನ್ನು ಕಠಿಣವಾಗಿ ತನಿಖೆ ಮಾಡುವುದು ಸರ್ಕಾರಕ್ಕೂ ಕಷ್ಟವಾಗುತ್ತದೆ. ಸಾಮಾನ್ಯ ಜನರಿಗೆ ಒಂದು ನ್ಯಾಯ, ಇಂತಹವರಿಗೆ ಇನ್ನೊಂದು ನ್ಯಾಯ. ಇದು ಈ ಸಮಾಜದ ಒಳ್ಳೆಯ ವ್ಯಕ್ತಿಗಳು ಭ್ರಮನಿರಸನವಾಗಲು ಕಾರಣವಾಗುತ್ತದೆ. ಪೊಲೀಸ್ ಕರ್ತವ್ಯವೆಂದರೆ ಕೇವಲ ಅಪರಾಧಿಗಳನ್ನು ಹಿಡಿಯುವುದು ಮಾತ್ರವಲ್ಲ ಅಪರಾಧಗಳನ್ನು ತಡೆಯುವುದು ಸಹ ಅವರ ಮೊದಲ ಆದ್ಯ ಕರ್ತವ್ಯವಾಗಿರುತ್ತದೆ.....

ಮೊದಲೇ ಹೇಳಿದಂತೆ ಮನುಷ್ಯನಿಗೆ ಧೈರ್ಯದ ಜೊತೆ ಅಷ್ಟೇ ಪ್ರಮಾಣದಲ್ಲಿ ಭಯವೂ ಇರಬೇಕು. ಆಸೆಯ ಜೊತೆ ಮಿತಿಯ ಯಾರಿಗೂ ತಿಳಿದಿರಬೇಕು. ಆಗ ಸ್ವಲ್ಪ ಒಳ್ಳೆಯದು ಸ್ವಲ್ಪ ಕೆಟ್ಟದ್ದು ಸಂಭವಿಸುತ್ತದೆ. ಇಲ್ಲದಿದ್ದರೆ ಈ ಎರಡನ್ನೂ ಮೀರಿ ವಿಕೃತಗಳು ನಡೆಯುತ್ತವೆ. ಬಹುಶಃ ಈ ತಂದೆ ಮಕ್ಕಳ ಹುಚ್ಚಾಟಗಳು ಅವರ ದುರಹಂಕಾರದ ಪ್ರತೀಕವೇ ಇರಬೇಕು. ಇಷ್ಟೆಲ್ಲ ತಿಳುವಳಿಕೆ, ಜಾಗೃತ ವ್ಯವಸ್ಥೆ, ವಯಸ್ಸು, ಎಲ್ಲಾ ಆದ ನಂತರವೂ ಈ ರೀತಿಯ ದುಷ್ಕೃತ್ಯಗಳಿಗೆ ಕೈ ಹಾಕುವ ಮನಸ್ಸು ಹೇಗೆ ಬರುತ್ತದೆ, ನನಗಂತೂ ತುಂಬಾ ಆಶ್ಚರ್ಯವಾಗುತ್ತದೆ......

ಮನುಷ್ಯನ ಆಸೆಗಳಿಗೆ ಒಂದು ಮಿತಿ ಇರುತ್ತದೆ. ಕೆಲವರು ಅತಿರೇಕಕ್ಕೆ ಹೋಗಿ ಅದರ ಪರಿಣಾಮಗಳನ್ನು ಗಮನಿಸದೆ ತಮ್ಮ ತೆವಲುಗಳನ್ನು ತೀರಿಸಿಕೊಳ್ಳುತ್ತಾರೆ. ಆದರೆ ಇದು ಅದೆಲ್ಲವನ್ನು ಮೀರಿದ್ದು. ಇವರಿಂದ ಈ ರಾಜ್ಯ, ಈ ದೇಶ ಈ ಸಮಾಜದ ರಕ್ಷಣೆ ಹೇಗೆ ಸಾಧ್ಯ.....

ಈಗ ಈ ಘಟನೆಯ ತನಿಖೆ, ಅಪರಾಧಿಗಳ ಬಂಧನ ಮತ್ತು ಶಿಕ್ಷೆಯ ಮೂಲಕ ಪೊಲೀಸ್ ವ್ಯವಸ್ಥೆ ಮತ್ತು ನ್ಯಾಯಾಂಗ ವ್ಯವಸ್ಥೆ ಒಂದು ಸಂದೇಶವನ್ನು ರಾಜ್ಯಕ್ಕೆ ಆ ಮೂಲಕ ದೇಶಕ್ಕೆ ನೀಡಬೇಕಾಗುತ್ತದೆ. ಮಹಿಳೆಯರ ಮೇಲಿನ ಈ ರೀತಿಯ ದೌರ್ಜನ್ಯಗಳು ಯಾವುದೇ ಸಂದರ್ಭದಲ್ಲಿ, ಯಾವುದೇ ಪರಿಸ್ಥಿತಿಯಲ್ಲಿ, ಎಷ್ಟೇ ಅಸಹಾಯಕರಾಗಿದ್ದಾಗಲೂ, ಶೋಷಕರು ಎಷ್ಟೇ ಪ್ರಬಲವಾಗಿದ್ದರೂ, ಇದರಿಂದ ಮಾತ್ರ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅವರಿಗೆ ಶಿಕ್ಷೆಯಾಗುತ್ತದೆ ಎಂದು ಸ್ಪಷ್ಟವಾಗಿ ತನ್ನ ಕ್ರಿಯೆಯ ಮೂಲಕ ಸಂದೇಶ ನೀಡಬೇಕು......

ಹಾಗೆಯೇ ಸಮಾಜದ ಎಲ್ಲ ಸಂವೇದನಾಶೀಲ ಮನಸ್ಸುಗಳು ಇಡೀ ಸಮಾಜಕ್ಕೆ ಈ ರೀತಿಯ ದುಷ್ಕೃತ್ಯಗಳನ್ನು ಸಹಿಸುವುದಿಲ್ಲ ಎಂಬುದನ್ನು ಸಾರಿ ಸಾರಿ ಹೇಳಬೇಕಿದೆ. ಯಾವ ಕಾರಣಕ್ಕೂ ಯಾವುದೇ ಮುಲಾಜಿಗೆ ಒಳಗಾಗದೆ ಈ ವಿಷಯದಲ್ಲಿ ಕಠಿಣ ಕ್ರಮಗಳನ್ನು ಕೈಗೊಳ್ಳಲೇಬೇಕು. ಇದು ಕೇವಲ ಮಹಿಳೆಯರು ಮಾತ್ರ ಪ್ರತಿಭಟಿಸಬೇಕಾದ ವಿಷಯವಲ್ಲ. ಪುರುಷರು ಸ್ವ ಇಚ್ಛೆಯಿಂದ ಭಾಗವಹಿಸಬೇಕು. ಏಕೆಂದರೆ ಇದು ಅತ್ಯಂತ ಅಸಹಜ ವಾತಾವರಣದ ಸಮಾಜವನ್ನು ಸೃಷ್ಟಿಸುತ್ತದೆ. ಇದು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಕೌಟುಂಬಿಕ ವ್ಯವಸ್ಥೆಯ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ದುಡಿಯುವ ಮಹಿಳೆಯರ ಮೇಲೆ ಕೆಟ್ಟ ಭಾವನೆ ಮೂಡಿಸುತ್ತದೆ.....

ಆದ್ದರಿಂದ ಈ 2024ರ ಆಧುನಿಕ ಸಮಾಜದಲ್ಲಿ ಪುರುಷ ಮತ್ತು ಮಹಿಳೆಯರ ಸ್ವಾತಂತ್ರ್ಯ, ಸಮಾನತೆ ಸಮ ಪ್ರಮಾಣದಲ್ಲಿ ಹಂಚಿಕೆಯಾಗುತ್ತಿರುವಾಗ, ಬಹುತೇಕ ಭಾರತೀಯ ಸಮಾಜದ ಜನ ಲೈಂಗಿಕ ವಿಷಯದಲ್ಲಿ ಮಡಿವಂತಿಕೆಯ ಕಾರಣಕ್ಕೋ, ಧಾರ್ಮಿಕ ಕಾರಣಕ್ಕೋ, ಆಧ್ಯಾತ್ಮಿಕ ಕಾರಣಕ್ಕೋ, ಅತ್ಯಂತ ಭಾವನಾತ್ಮಕ ಮನಸ್ಥಿತಿ ಹೊಂದಿ ಸಭ್ಯವಾಗಿ ನಡೆದುಕೊಳ್ಳುವುದು ಪ್ರಾಯೋಗಿಕವಾಗಿ ಆಚರಣೆಯಲ್ಲಿರುವಾಗ, ಕೆಲವೇ ಕೆಲವು ನೀಚರ ಈ ಕೃತ್ಯಗಳು ಸಮಾಜದ ಕ್ರಮಬದ್ಧತೆಗೆ ಮಾರಕವಾಗಬಾರದು......

ನನ್ನ ವೈಯಕ್ತಿಕ ಅನುಭವದಲ್ಲಿ ಹೇಳುವುದಾದರೆ, ಈ ವಿಷಯದಲ್ಲಿ ಶೇಕಡಾ 90% ಕ್ಕೂ ಹೆಚ್ಚು ಭಾರತೀಯರು ಸ್ವಲ್ಪ ಒಳ್ಳೆಯದು ಅಥವಾ ಸ್ವಲ್ಪ ಕೆಟ್ಟದ್ದು ಮಾಡಬಹುದು. ಆದರೆ ಈ ವಿಕೃತಗಳನ್ನು ಮಾಡಲು ಖಂಡಿತ ಹೆದರುತ್ತಾರೆ ಮತ್ತು ಆ ಮನೋಭಾವವನ್ನು ಹೊಂದಿರುವುದಿಲ್ಲ. ಆದ್ದರಿಂದ ಈ ಸದ್ಯ ಸಮಾಜವನ್ನು ಅದೇ ರೀತಿ ಉಳಿಸುವುದು ಬಹಳ ಮುಖ್ಯ. ವಿಕೃತ ಮನಸ್ಥಿತಿಯು ವಿಕೃತಿಯ ಕಾರಣಕ್ಕೆ ಬಂದರೆ ಅದು ಒಂದು ರೀತಿಯ ಅಪರಾಧ. ಕೆಲವು ಅಮಲು ಕ್ರಿಮಿನಲ್ ಗಳು ಇದರಲ್ಲಿ ಸೇರುತ್ತಾರೆ. ಆದರೆ ಹಣ, ಅಧಿಕಾರ ಅಂತಸ್ತಿನ ದುರಹಂಕಾರದಿಂದ ಮೂಡಿದರೆ ಅದು ಕ್ಷಮಿಸಲಾಗದ ಅಪರಾಧ. ಅವರಿಗೆ ಅತಿಹೆಚ್ಚು ಕಠಿಣ ಶಿಕ್ಷೆ ನೀಡಲೇಬೇಕಾಗುತ್ತದೆ. ಈಗ ಇದರಲ್ಲಿ ಭಾಗಿಯಾದರು ಆ ವಿಭಾಗಕ್ಕೆ ಸೇರಿದವರು.....

ಇಡೀ ಘಟನೆಯಲ್ಲಿ ಮಾಧ್ಯಮಗಳ ಪಕ್ಷಪಾತ ಮತ್ತು ನೈತಿಕ ಪ್ರಜ್ಞೆಯನ್ನು ಪ್ರಶ್ನಿಸುತ್ತಾ......

ಪ್ರಬುದ್ಧ ಮನಸ್ಸು ಪ್ರಬುದ್ಧ ಸಮಾಜ,

ಜನರ ಜೀವನಮಟ್ಟ ಸುಧಾರಣೆಯ ಗುರಿಯೊಂದಿಗೆ, ಮನಗಳಲ್ಲಿ, ಮನೆಗಳಲ್ಲಿ, ಮತಗಳಲ್ಲಿ, ಪರಿವರ್ತನೆಗಾಗಿ, ಮನಸ್ಸುಗಳ ಅಂತರಂಗದ ಚಳವಳಿ,



» ಲೇಖನ
ವಿವೇಕಾನಂದ.
ಹೆಚ್.ಕೆ.
9844013068

## ಹೊಸದುರ್ಗ: ನಿಜಲಿಂಗಪ್ಪ ಕಾಲೇಜಿನಲ್ಲಿ ವಿಶ್ವ ತಂಬಾಕು ವಿರೋಧಿ ದಿನ

» **ಹೊಸದುರ್ಗ**

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಹಾಲುರಾಮೇಶ್ವರ ಯೋಜನಾ ಕಛೇರಿ ವ್ಯಾಪ್ತಿಯ ವತಿಯಿಂದ ಪಟ್ಟಣದ ಎಸ್ ನಿಜಲಿಂಗಪ್ಪ ಕಾಲೇಜಿನಲ್ಲಿ ವಿಶ್ವ ತಂಬಾಕು ವಿರೋಧಿ ದಿನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾಲೇಜಿನ ಪ್ರಾಂಶುಪಾಲರಾದ ಸಂತೋಷ ಕಾರ್ಯಕ್ರಮ ಉದ್ಘಾಟಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು

ಪ್ರೌಢಶಾಲೆಯ ಶಿಕ್ಷಕ ಸೋಮಶೇಖರ್ ಮಾದಕ ವಸ್ತುಗಳ ಸೇವನೆ, ಗುಟ್ಕಾ, ತಂಬಾಕು, ಬೀಡಿ ಸಿಗರೇಟು ಸೇವನೆ ಮಾಡುವುದರಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಮಾಹಿತಿ ನೀಡಿದರು.




ತಾಲೂಕು ಯೋಜನಾಧಿಕಾರಿ ಚಂದ್ರಶೇಖರ್ ವಿದ್ಯಾರ್ಥಿಗಳ ಪೋಷಕರು ಧರ್ಮಸ್ಥಳ ಸಂಘಕ್ಕೆ ಸೇರುವುದರಿಂದ ಇರುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು, ಕಾಲೇಜಿನ ಶಿಕ್ಷಕರಾದ ಸಂಜಯ್ ನಾಡಗೌಡ ಸೌಭಾಗ್ಯ, ಕವಿತಾ ಜ್ಞಾನ ವಿಕಾಸ ಸಮನ್ವಯಾಧಿಕಾರಿ ಗಂಗಮ್ಮ ಸೇವಾ ಪ್ರತಿನಿಧಿ ಜ್ಯೋತಿ ಸ್ಥೆರಿದಂತೆ ಕಾಲೇಜಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು

ಬಾಗೂರಿನಲ್ಲಿ ಕಾರ್ಯಕ್ರಮ: :ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಾಗೂರು ಕಾರ್ಯಕ್ಷೇತ್ರ ವಲಯದಿಂದ ಹೊಸದುರ್ಗ ತಾಲೂಕಿನ ಬಾಗೂರು ಗ್ರಾಮದ ಮಂಜುಶ್ರೀ ಜ್ಞಾನವಿಕಾಸ ಕೇಂದ್ರದಲ್ಲಿ ನಡೆದ ಮಾಸಿಕ ಸಭೆಯಲ್ಲಿ ವಿಶ್ವ ತಾಂಬಾಕು ವಿರೋಧಿ ದಿನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ತಾಲೂಕು ಯೋಜನಾಧಿಕಾರಿ ಚಂದ್ರಶೇಖರ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಪ್ರತಿಯೊಬ್ಬರೂ ಸಹಾ ದುಶ್ಚಟಗಳಿಗೆ ದಾಸನಾಗದೆ ಪ್ರತಿನಿತ್ಯ ಆರೋಗ್ಯದ ಕಡೆಗೆ ಗಮನವನ್ನು ನೀಡಬೇಕು ಅಂದಾಗ ಮಾತ್ರ ದುಶ್ಚಟ ಮುಕ್ತ ಸಮಾಜ ವಾಗಲು ಸಾಧ್ಯವಿದೆ ಎಂದರು.

ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಪ್ರೌಢಶಾಲೆಯ ಶಿಕ್ಷಕರಾದ ಸೋಮಶೇಖರ್ ಮಾತನಾಡಿ ಇವತ್ತಿನ ದಿನಗಳಲ್ಲಿ ಮದ್ಯ ವಯಸ್ಸಿನ ಮಕ್ಕಳು ಹೆಚ್ಚಾಗಿ ಗುಟ್ಕಾ ಬೀಡಿ ಸಿಗರೇಟು ಮಾದಕ ವಸ್ತುಗಳ ಸೇವನೆಗೆ ದಾಸರಾಗಿದ್ದಾರೆ ಪೋಷಕರು ವಯಸ್ಸಿಗೆ ಬಂದ ಮಕ್ಕಳ ಬಗ್ಗೆ ಹಾಗಾಗ ಗಮನ ಹರಿಸುತ್ತಿರಬೇಕು ಅವರ ಚಲನ ವಲನಗಳನ್ನ ಸೂಕ್ಷ್ಮವಾಗಿ ಗಮನಿಸುತ್ತಿರಬೇಕು ಎಂಬ ಎಚ್ಚರಿಕೆಯನ್ನ ನೀಡಿದರು. ಜ್ಞಾನ ವಿಕಾಸ ಸಮನ್ವಧಿಕಾರಿ ದ್ರಾಕ್ಷಾಯಿಣಿ ಅಧ್ಯಕ್ಷತೆ ವಹಿಸಿದ್ದರು.ಕೇಂದ್ರದ ಸದಸ್ಯೆ ಗಂಗಮ್ಮ ಉಪಸ್ಥಿತರಿದ್ದರು.

Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T